
ANANTHKUMAR PRATISHTHANA

# ಅನಂತಪಥ

ಪುಟ 7
ಕಣ್ಮರೆಯಾದ ಕಾಡಿನ ಜೀವ
ಕೆ. ಎಂ. ಚಿಣ್ಣಪ್ಪ



ಸಂಪುಟ - 4 ಮಾರ್ಚ್ - 2024 ಸಂಚಿಕೆ - 45

# ಚುನಾವಣೆಗಳಲ್ಲಿ ಅನಂತ ಯಶೋಗಾಥೆ



೧೯೮೯ರ ನಂತರ ಕರ್ನಾಟಕ ರಾಜ್ಯದಲ್ಲೂ ದೇಶದಲ್ಲೂ ನಡೆದ ಎಲ್ಲ ಸಾರ್ವತ್ರಿಕ ಚುನಾವಣೆಗಳಲ್ಲಿ ಅನಂತಕುಮಾರರು ಒಬ್ಬ ಕಾರ್ಯಕರ್ತರಾಗಿ, ಅಭ್ಯರ್ಥಿಯಾಗಿ, ಪ್ರಭಾರಿಯಾಗಿ, ಪ್ರಚಾರಕರಾಗಿ, ಪಕ್ಷದ ಪದಾಧಿಕಾರಿಯಾಗಿ ಸರ್ವತೋಮುಖ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಅವರ ಕಾರ್ಯವೈಖರಿಯ ಬರಹರೂಪವು ಚುನಾವಣೆಗಳ ಇತಿಹಾಸದಲ್ಲಿ ಒಂದು ಅಪರೂಪದ ದಾಖಲೆಯಾಗುವುದರಲ್ಲಿ ಸಂಶಯವಿಲ್ಲ.

೧೯೮೭-೮೮ರ ನಡುವೆ ಅನಂತಕುಮಾರ್ ಭಾರತೀಯ ಜನತಾ ಯುವಮೋರ್ಚಾ ಅಧ್ಯಕ್ಷರಾದರು. ೧೯೮೮ರಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಪ್ರಮುಖ ಜವಾಬ್ದಾರಿಯನ್ನು ವಹಿಸಿಕೊಂಡರು. ೧೯೮೯ರ ವಿಧಾನಸಭಾ ಚುನಾವಣೆ ಅವರ ಮೊದಲನೇ ಚುನಾವಣೆ. ಅದಕ್ಕೆ ಮೊದಲಿನ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ ಕೇವಲ ಇಬ್ಬರು ಶಾಸಕರನ್ನು ಹೊಂದಿತ್ತು. ಅವರಲ್ಲಿಯೂ ಒಬ್ಬರು ಗೆದ್ದನಂತರ ಪಕ್ಷಾಂತರ ಮಾಡಿದ್ದರು! ೧೯೮೯ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಕೇವಲ ನಾಲ್ಕು ಸ್ಥಾನಗಳನ್ನು ಗಳಿಸಿತು. ೧೯೮೯ರಲ್ಲಿ ಭಾರತೀಯ ಜನತಾಪಕ್ಷದಿಂದ ಒಬ್ಬ ಲೋಕಸಭಾ ಸದಸ್ಯರೂ ಇರಲಿಲ್ಲ. ಪಕ್ಷದಿಂದ ಚುನಾವಣೆಗಾಗಿ ಸ್ಪರ್ಧಿಗಳನ್ನು ಹುಡುಕುವುದೂ ಪ್ರಯಾಸಕರವಾಗಿತ್ತು. ಅನಂತಕುಮಾರ್ ರಾಜ್ಯ ಪ್ರಧಾನಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡ ಕೂಡಲೇ ಪಕ್ಷದೆಡೆಗೆ ಜನರನ್ನು ಸೆಳೆಯಲು ಅಗತ್ಯವಾದ ತಂತ್ರಗಳನ್ನು ಹೆಣೆಯತೊಡಗಿದರು. ಇದರ ಅಂಗವಾಗಿ, ಸೋಮನಾಥದಿಂದ ಅಯೋಧ್ಯೆಗೆ ಹೊರಟಿದ್ದ ರಥಯಾತ್ರೆಯ ಜವಾಬ್ದಾರಿ ಹೊತ್ತಿದ್ದ ಪ್ರಮೋದ್ ಮಹಾಜನ್‌ರ ಮನವೊಲಿಸಿ ಯಾತ್ರೆಯು ಕರ್ನಾಟಕದ ಹುಮ್ನಾಬಾದ್ ಮೂಲಕ ಹಾದುಹೋಗುವಂತೆ ಮಾಡಲು ಯಶಸ್ವಿಯಾದರು. ಇದರಿಂದ ಪಕ್ಷವು ಜನರ ಗಮನವನ್ನೂ ದೊಡ್ಡಮಟ್ಟದಲ್ಲಿ ಸೆಳೆಯಿತು. ಯಡಿಯೂರಪ್ಪ- ಬಿ.ಬಿ. ಶಿವಪ್ಪ- ಅನಂತಕುಮಾರರ ನೇತೃತ್ವದಲ್ಲಿ ನಾಯಕತ್ವದ ಹೊಸ ತಂಡವೊಂದು ನಿರ್ಮಾಣವಾಯಿತು. ಬೀದರನ್ನು ಪ್ರತಿನಿಧಿಸುತ್ತಿದ್ದ ಸಂಸದ ರಾಮಚಂದ್ರ ವೀರಪ್ಪ ಪಕ್ಷಕ್ಕೆ ಸೇರಿ ಬಲ ಹೆಚ್ಚಿಸಿದರು. ಮೈಸೂರಿನ ಮಹಾರಾಜ ಶ್ರೀಕಂಠದತ್ತ ಒಡೆಯರ್ ಕೂಡ ಪಕ್ಷಕ್ಕೆ ಬಂದು ಸ್ಟಾರ್ ಪ್ರಚಾರಕರಾದರು. ಯಡಿಯೂರಪ್ಪ ಮತ್ತು ಅನಂತಕುಮಾರರು ಹಣಕಾಸಿನ ಮುಗ್ಗಟ್ಟಿನ ನಡುವೆಯೂ ರಾಜ್ಯಾದ್ಯಂತ ಬಿರುಗಾಳಿಯಂತೆ ಪ್ರವಾಸ ಮಾಡಿದರು. ಇವೆಲ್ಲವುದರ ಪರಿಣಾಮವಾಗಿ ೧೯೯೧ರ ಲೋಕಸಭಾ ಚುನಾವಣೆಯಲ್ಲಿ ಪಕ್ಷವು ನಾಲ್ಕು ಕ್ಷೇತ್ರಗಳಲ್ಲಿ ಜಯಗಳಿಸಿತು. ಅನಂತಕುಮಾರರು ಜನರ ಹಾಗೂ ಪಕ್ಷದ ನಾಯಕತ್ವದ ಗಮನವನ್ನು ಸೆಳೆದರು.

ಜನರ ನಡುವೆ ಇದ್ದು ಅವರ ಸಮಸ್ಯೆಗಳನ್ನು ಅರಿತು ಸ್ಪಂದಿಸುವುದೊಂದೇ ಜನಮನವನ್ನು ತಲುಪಲು ಇರುವ ಮಾರ್ಗ, ಇದಕ್ಕೆ ಬಳಸು ಮಾರ್ಗಗಳಿಲ್ಲ ಎಂದು ಅರಿತಿದ್ದ ಅನಂತಕುಮಾರರು ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯಾದ ಕೂಡಲೇ ಪಕ್ಷವನ್ನು ಅನೇಕ ಜನಪರ ಹೋರಾಟಗಳಲ್ಲಿ ತೊಡಗಿಸಿ ಅವುಗಳ ನೇತೃತ್ವ ವಹಿಸಿದರು. ಈ ಹಿನ್ನೆಲೆಯಲ್ಲಿ, ಅವರು ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜಾರೋಹಣ ಮಾಡಲು ನಡೆಸಿದ (ಪುಟ 6 ರಲ್ಲಿ ಮುಂದುವರಿದಿದೆ)

# ಸಮಾಜಮುಖಿ ಅದಮ್ಯಚೇತನದ "ಸೇವಾಯಜ್ಞ"

## ಶ್ರೀ ಶ್ರೀ ಅಭಿನವಶಂಕರ ಭಾರತೀ ಮಹಾಸ್ವಾಮಿಗಳು

**ಶ್ರೀಮಜ್ಜಗದ್ಗುರು ಶ್ರೀ ಕೂಡಲಿ ಶೃಂಗೇರಿ ಮಹಾಸಂಸ್ಥಾನ, ಕೂಡಲಿ**



ಅದಮ್ಯ ಚೇತನ ಸಂಸ್ಥೆಯ ಕಾರ್ಯಗಳನ್ನು ದಾನಧರ್ಮ, Charity ಎನ್ನುವುದಕ್ಕಿಂತ ಸನಾತನ ಪರಿಕಲ್ಪನೆಯ ಯಜ್ಞ ಎನ್ನಬಹುದು. Charity ಎನ್ನುವುದು ನಮ್ಮ ಹೊಟ್ಟೆ ತುಂಬಿದ ಮೇಲೆ ಮಾಡುವ ಸಹಾಯ; ಇದು ಕ್ರೈಸ್ತಧರ್ಮದ ಪರಿಕಲ್ಪನೆ. ಸನಾತನ ಸಂಪ್ರದಾಯದಲ್ಲಿ ದಾನ ಎಂಬ ಪರಿಕಲ್ಪನೆಯಿದೆ; ಇದು Donation ಗೆ ಸಂವಾದಿಯಲ್ಲ.

“ಜೀವನೇ ಯಾವದಾದಾನಂ ಸ್ಯಾತ್ ಪ್ರದಾನಂ ತತೋsಧಿಕಮ್” ಜೀವನದಲ್ಲಿ ನಾವು ಏನನ್ನು ಪಡೆಯುತ್ತೇವೆಯೋ ಅದಕ್ಕಿಂತ ಹೆಚ್ಚಿನದನ್ನು ಕೊಡುವಂತಾಗಲಿ ಎಂದು ನಾವು ಪ್ರಾರ್ಥಿಸುತ್ತೇವೆ. ಇದು ಹೇಗೆ ಸಾಧ್ಯ? ಉದಾಹರಣೆಗೆ, ಒಂದು ಪತ್ರಿಕೆಗೆ ಲೇಖನವನ್ನು ಹೇಗೆ ಬರೆಯಬೇಕೆಂಬುದು ನಾವು ನಮ್ಮ ಹಿಂದಿನವರಿಂದ ಪಡೆದ ಜ್ಞಾನ. ಇದರ ಮೌಲ್ಯವರ್ಧನೆ ಮಾಡಿ, ಹೆಚ್ಚಿನ ಸಂಶೋಧನೆಗೊಳಪಡಿಸಿ, ಇನ್ನಷ್ಟು ವಿಚಾರಗಳನ್ನು ಸೇರಿಸಿ ಲೇಖನ ಬರೆದು ಹೊಸ ಹೊಸ ಮಾಧ್ಯಮಗಳ ಮೂಲಕ ಪ್ರಚಾರ ಮಾಡಿದರೆ ಅದು ನಾವು ಪಡೆದದ್ದಕ್ಕಿಂತ ಹೆಚ್ಚು ಕೊಡುವ ವಿಧಾನ. ನಾವು ಪಡೆದ ವಿದ್ಯೆಯನ್ನು ಸರಳವಾಗಿ ಸಣ್ಣ ಸಣ್ಣ ಕತೆಗಳ ಮೂಲಕವೂ ಹೇಳುವುದು ಇನ್ನೊಂದು ವಿಧಾನ. ಒಂದು ಮಗುವಿಗೆ ಒಳ್ಳೆಯ ಕಂಠವಿದೆ; ಅದನ್ನು ಅದು ಮಾತನಾಡುವುದಕ್ಕೆ ಮಾತ್ರ ಬಳಸಿದರೆ ಅದು ನಾಶ. ಅದರ ಬದಲು ಅದನ್ನು ಬಳಸಿ ಹಾಡಲು ಕಲಿತು ಜನರ ಮನಸ್ಸಿಗೆ ಸಂತೋಷ ಉಂಟುಮಾಡಿದರೆ ಅದು ಸಾರ್ಥಕ ಜೀವನ. ಜೀವನದ ಎಲ್ಲ ಹಂತಗಳಲ್ಲೂ ನಾವು ಪಡೆದದ್ದಕ್ಕಿಂತ ಹೆಚ್ಚು ಕೊಡಬೇಕು, ಇಲ್ಲದಿದ್ದರೆ ನಾಶವಾಗುತ್ತೇವೆ. ಅಂದರೆ, ಬದುಕಿದ್ದರೂ ಸತ್ತಂತೆ. ಆಹಾರ, ನಿದ್ರಾ, ಮೈಥುನಗಳು ಎಲ್ಲ ಪ್ರಾಣಿಗಳಿಗೆ ಸಮಾನವಾದ ಲಕ್ಷಣಗಳು. ಆದರೆ ಮನುಷ್ಯನಿಗೆ ಅಪರಿಮಿತ ಸಾಮರ್ಥ್ಯವಿರುತ್ತದೆ. ತಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿ ದೈವತ್ವಕ್ಕೇರಿದ ಅನೇಕರನ್ನು ನಾವು ನೋಡಬಹುದು.

ನಾವು ತಪಸ್ಸು ಮಾಡದೆ ವಿಶಾಲವಾದ ಜ್ಞಾನಭಂಡಾರವನ್ನು ನಮ್ಮ ಹಿರಿಯರಿಂದ ಬಳುವಳಿಯಾಗಿ ಪಡೆದಿದ್ದೇವೆ. ಇದು ನಮ್ಮ ಸಂಪ್ರದಾಯದ ಅಂತರ್ಗತಶಕ್ತಿ. ನಮ್ಮ ಪರಂಪರೆಯಲ್ಲಿ ದೇವಯಜ್ಞ, ಪಿತೃಯಜ್ಞ, ಮನುಷ್ಯಯಜ್ಞ, ಭೂತಯಜ್ಞ ಮತ್ತು ಬ್ರಹ್ಮಯಜ್ಞ ಎಂಬ ಪಂಚಮಹಾಯಜ್ಞಗಳಿವೆ. ಈ ದೇಹವು ಪಂಚಮಹಾಭೂತಗಳಿಂದಾಗಿದೆ. ನಮ್ಮ ನಿರಂತರ ಅಸ್ತಿತ್ವಕ್ಕೆ ಪಂಚಮಹಾಭೂತಗಳೇ ಕಾರಣ. (ಪುಟ 6 ರಲ್ಲಿ ಮುಂದುವರಿದಿದೆ)

# ತಲಕಾಡಿನ ದೇವಾಲಯಗಳು

ಶ್ರದ್ಧೆಯ ಶಿಲ್ಪ

ಟಿ. ಎಸ್. ಗೋಪಾಲ್





ಮೈಸೂರು ಜಿಲ್ಲೆಯ ತಲಕಾಡು - ಪೌರಾಣಿಕ, ಐತಿಹಾಸಿಕ, ಜಾನಪದ ಮೊದಲಾದ ಎಲ್ಲ ರಂಗಗಳಲ್ಲೂ ಪ್ರಸಿದ್ಧಿ ಪಡೆದ ಮಹತ್ತ್ವದ ಸ್ಥಳ. ತಲವನಪುರ ಎಂಬ ಹೆಸರಿನಿಂದ ಋಷಿಮುನಿಗಳ ತಪೋಭೂಮಿಯಾಗಿ ಪೌರಾಣಿಕ ಮಹತ್ತ್ವವನ್ನೂ ಪಡೆದುಕೊಂಡಿರುವ ತಲಕಾಡು, ಕರ್ನಾಟಕದ ಅತಿ ಪ್ರಾಚೀನ ಪಟ್ಟಣಗಳ ಪಟ್ಟಿಯಲ್ಲಿ ತಪ್ಪದೆ ಸ್ಥಾನಪಡೆಯುತ್ತದೆ. ಈ ಪ್ರದೇಶದಲ್ಲಿ ನಡೆಸಲಾದ ಉತ್ಖನನದಲ್ಲಿ ಬೃಹತ್ ಶಿಲಾಯುಗಕ್ಕೆ ಸೇರಿದ ಹಲವು ಅವಶೇಷಗಳು ಕಂಡುಬಂದಿವೆಯಂತೆ. ಕರ್ನಾಟಕದ ಅತಿ ಪ್ರಾಚೀನ ಜೈನ ಬಸದಿ ಈ ಊರಿನಲ್ಲಿದ್ದಿತು. ಕ್ರಿ.ಶ. ಆರನೆಯ ಶತಮಾನದ ಹೊತ್ತಿಗೇ ಗಂಗ ಅರಸರ ರಾಜಧಾನಿಯಾಗಿದ್ದ ತಲಕಾಡು ಚೋಳರ ಕಾಲಕ್ಕೆ ರಾಜರಾಜಪುರ ಎನಿಸಿಕೊಂಡಿತು. ಹೊಯ್ಸಳ ಅರಸ ವಿಷ್ಣುವರ್ಧನ ಈ ನಗರವನ್ನು ಚೋಳರ ಹಿಡಿತದಿಂದ ಮುಕ್ತಿಗೊಳಿಸಿ, 'ತಲಕಾಡುಗೊಂಡ' ಎಂಬ ಬಿರುದಿಗೆ ಪಾತ್ರನಾದ. 1116ರ ವೇಳೆಗೆ ತಲಕಾಡಿನಲ್ಲಿ ಕೀರ್ತಿನಾರಾಯಣನ ದೇವಾಲಯವನ್ನು ಕಟ್ಟಿಸಿದ್ದು ವಿಷ್ಣುವರ್ಧನನೇ.

ಇನ್ನೊಂದು ಕಥೆಯ ಪ್ರಕಾರ, ಗಜಾರಣ್ಯಕ್ಷೇತ್ರವೆಂದು ಹೆಸರಾಗಿದ್ದ ಈ ಪ್ರದೇಶವನ್ನು ತಲ ಮತ್ತು ಕಾಡ ಎಂಬ ಬೇಡರ ಯುವಕರು ಪ್ರಸಿದ್ಧಿಗೊಳಿಸಿದರಂತೆ. ಅವರಿಬ್ಬರ ಹೆಸರೇ ಊರ ಹೆಸರಾಯಿತೆಂಬ ಜಾನಪದ ಐತಿಹ್ಯವೂ ಉಂಟು. ಮೈಸೂರು ಅರಸರು ತನ್ನ ಒಡವೆಗಳನ್ನು ಕಿತ್ತುಕೊಳ್ಳಲು ಸಂಚುಹೂಡಿದಾಗ ಮನನೊಂದ ಸ್ಥಳೀಯ ರಾಣಿ ಅಲಮೇಲಮ್ಮ ನದಿಗೆ ಹಾರಿ ಪ್ರಾಣತ್ಯಾಗ ಮುನ್ನ 'ತಲಕಾಡು ಮರಳಾಗಲಿ, ಮಾಲಂಗಿ ಮಡುವಾಗಲಿ, ಮೈಸೂರು ಅರಸರಿಗೆ ಮಕ್ಕಳಾಗದೆ ಹೋಗಲಿ' ಎಂದು ಶಾಪವಿತ್ತ ಕಥೆ ಜನಜನಿತವಾಗಿದೆ.


ಶಾಪದ ಕಥೆ ಹೇಗೂ ಇರಲಿ, ಕ್ರಿ.ಶ. 1342ರ ವೇಳೆಗೆ ತಲಕಾಡಿನ ಅಭಿವೃದ್ಧಿಗೆ ಕಾರಣನಾದ ಮಾಧವಮಂತ್ರಿ ಎಂಬ ಹೊಯ್ಸಳದಂಡನಾಯಕ ಕಾವೇರಿನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿದ. ಅಣೆಕಟ್ಟೆಯ ಇನ್ನೊಂದು ಬದಿಗಿದ್ದ ತಲಕಾಡಿನಲ್ಲಿ ಕಾವೇರಿಯ ಹರಿವು ತಗ್ಗಿ ಮರಳು ತುಂಬಿಕೊಂಡಿದ್ದಂತೂ ನಿಜ. ತಲಕಾಡಿನ ಹಲವು ದೇವಾಲಯಗಳನ್ನು ನೋಡಲು ಬರುವ ಪ್ರವಾಸಿಗರು ಮರಳುದಿಣ್ಣೆಗಳನ್ನು ಹತ್ತಿಳಿಯುವುದೇ ಒಂದು ವಿಶೇಷ ಅನುಭವ. ಹೊಯ್ಸಳರ ನಂತರ ಐತಿಹಾಸಿಕವಾಗಿಯೂ ಧಾರ್ಮಿಕವಾಗಿಯೂ ಬಹುಕಾಲ ಪ್ರಸಿದ್ಧಿಯಲ್ಲಿದ್ದ ತಲಕಾಡಿನಲ್ಲಿ ಅನೇಕ ದೇವಾಲಯಗಳಿರುವುದು ಅಚ್ಚರಿಯೇನಲ್ಲ. ಚೋಳರ ವಿರುದ್ಧ ವಿಜಯ ಸಾಧಿಸಿದ ನೆನಪಿಗೆ ವಿಷ್ಣುವರ್ಧನ ಕಟ್ಟಿಸಿದ ಕೀರ್ತಿನಾರಾಯಣನ ದೇಗುಲ ಶಿಥಿಲಗೊಂಡು ದುಸ್ಥಿತಿಗೆ ತಲುಪಿದ್ದುದನ್ನು ತೀರಾ ಇತ್ತೀಚೆಗೆ ಪುರಾತತ್ತ್ವ ಇಲಾಖೆಯವರು ಯಥಾಸ್ಥಿತಿ ಪುನರ್ನಿರ್ಮಾಣ ಮಾಡಿರುವುದೊಂದು ಸಮಾಧಾನಕರ ಸಂಗತಿ. ಹದಿನೇಳನೆಯ ಶತಮಾನದಲ್ಲಿ ಕಟ್ಟಿರಬಹುದಾದ ಪ್ರವೇಶಮಂಟಪವೊಂದು ಮುಖ್ಯದೇವಾಲಯದ ಮುಂಭಾಗದಲ್ಲಿ ಪ್ರತ್ಯೇಕವಾಗಿದೆ. ನಕ್ಷತ್ರಾಕಾರದ ಎತ್ತರವಾದ ಜಗತಿಯ ಮೇಲೆ ಮುಖ್ಯ ದೇವಾಲಯವು ನಿರ್ಮಾಣವಾಗಿದೆ. ಹೊಯ್ಸಳಶೈಲಿಯ ಉತ್ತಮ ಮಾದರಿಯಾದ ಗುಡಿಯ ಹೊರಭಿತ್ತಿಯಲ್ಲಿ ವಿಶೇಷ ಶಿಲ್ಪಗಳಿಲ್ಲ. ಕಕ್ಷಾಸನ, ತಿರುಗಣೆಯ ಕಂಬಗಳಿಂದ ಕೂಡಿದ ಮಂಟಪ, ನವರಂಗಗಳ ಮೂಲಕ ಗರ್ಭಗುಡಿಯತ್ತ ಹೋಗಬೇಕು. ಒಳಗುಡಿಯಲ್ಲಿ ಕಮಲಪೀಠದ ಮೇಲೆ ಹತ್ತು ಅಡಿಗಳಿಗೂ ಹೆಚ್ಚು ಎತ್ತರದ ನಾರಾಯಣನ ಭವ್ಯವಾದ ವಿಗ್ರಹವಿದೆ, ಶಂಖ, ಚಕ್ರ, ಗದಾ, ಪದ್ಮಗಳನ್ನು ಧರಿಸಿರುವ ವಿಷ್ಣು ಕೀರ್ತಿನಾರಾಯಣನೆಂಬ ಹೆಸರಿನಿಂದ ಪ್ರಸಿದ್ಧ. ಸಮಭಂಗಿಯಲ್ಲಿ ನಿಂತ ವಿಗ್ರಹದ ಪ್ರಭಾವಳಿಯಲ್ಲಿ ಪುಷ್ಪವಿನ್ಯಾಸದ ನಡುವೆ ದಶಾವತಾರಗಳನ್ನು ಚಿತ್ರಿಸಲಾಗಿದೆ.







ವಿಜಯನಗರದ ಅರಸರ ಆಳ್ವಿಕೆಯಲ್ಲೂ ತಲಕಾಡು ಮುಖ್ಯ ಪಟ್ಟಣವಾಗಿ ಮುಂದುವರಿಯಿತು. ಹದಿನಾಲ್ಕನೆಯ ಶತಮಾನದಲ್ಲಿ ನಿರ್ಮಿತವಾದ ವೈದ್ಯೇಶ್ವರ ದೇವಾಲಯ ಹೊಯ್ಸಳ-ವಿಜಯನಗರ ಶೈಲಿಗಳೆರಡನ್ನೂ ಬಿಂಬಿಸುವ ನಿರ್ಮಾಣವಾಗಿದೆ. ಚೋಳರ ಕಾಲದಲ್ಲಿ ಪ್ರತಿಷ್ಠೆಮಾಡಲಾದ ಶಿವಲಿಂಗಕ್ಕೆ ಹೊಯ್ಸಳ ದಂಡನಾಯಕ ಮಾಧವಮಂತ್ರಿ, ದೇವಾಲಯದ ಕಟ್ಟಡವನ್ನು ಕಟ್ಟಿಸಿದನೆಂದು ಹೇಳಲಾಗಿದೆ. ಮೂಲದೇಗುಲದ ಸುತ್ತ ದೊಡ್ಡ ಪ್ರಾಕಾರವೂ ಹಲವು ಚಿಕ್ಕ ಗುಡಿಗಳೂ ಇವೆ. ಗುಡಿಯ ಪ್ರವೇಶದ್ವಾರದೆಡೆಯಲ್ಲಿ ಬಾಗಿಲೆತ್ತರಕ್ಕೂ ಇರುವ ದ್ವಾರಪಾಲಕರ ಶಿಲ್ಪಗಳು ಬಹು ವಿಶೇಷವಾಗಿವೆ. ಬಾಗಿಲವಾಡದ ಕೆತ್ತನೆಯೂ ಅಷ್ಟೇ ಸುಂದರವಾಗಿದೆ. ನಡುಗುಡಿಯಲ್ಲಿ ಸೂರ್ಯ, ಸರಸ್ವತಿ, ಗಣಪತಿ, ಚಂಡಿಕೇಶ್ವರ ಮೊದಲಾದ ದೇವತಾಶಿಲ್ಪಗಳನ್ನು ಕಾಣಬಹುದು. ಹೊರಗೋಡೆಯ ಉದ್ದಕ್ಕೂ ಕಂಬಗಳ ಮೇಲಿರುವ ಉಬ್ಬುಶಿಲ್ಪಗಳು ಹಂಪೆಯ ದೇವಾಲಯಶಿಲ್ಪಗಳನ್ನು ನೆನಪಿಸುತ್ತವೆ. ಗಣಪತಿ, ವೀರಭದ್ರ, ಭೈರವ ಮತ್ತಿತರ ಶಿವನ ವಿವಿಧ ರೂಪಗಳು, ಬ್ರಹ್ಮ, ದುರ್ಗೆ ಮೊದಲಾದ ದೇವತಾಶಿಲ್ಪಗಳು, ಮಾರ್ಕಂಡೇಯ, ಬೇಡರ ಕಣ್ಣಪ್ಪ ಮೊದಲಾದ ಶಿವಭಕ್ತರು ಈ ಹೊರಭಿತ್ತಿಯ ಶಿಲ್ಪಗಳಲ್ಲಿ ಕಂಡುಬರುತ್ತಾರೆ. 17ನೆಯ ಶತಮಾನದ ಹೊತ್ತಿಗೆ ಕಟ್ಟಿರಬಹುದಾದ ಗಾರೆಯ ಆಕರ್ಷಕ ಶಿಖರವೂ ಮನಸೆಳೆಯುವಂತಿದೆ. ವೈದ್ಯನಾಥೇಶ್ವರ ದೇಗುಲವಲ್ಲದೆ ಗಂಗರ ಕಾಲದ ನಿರ್ಮಾಣಗಳಾದ ಮರಳೇಶ್ವರ ಹಾಗೂ ಪಾತಾಳೇಶ್ವರ ದೇವಾಲಯಗಳೂ ಆಸುಪಾಸಿನಲ್ಲಿವೆ. (ಸೌಜನ್ಯ: ಆಕಾಶವಾಣಿ, ಮೈಸೂರು)



# ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

### ಅಧ್ಯಾಯ- 21

## ಶಿಸ್ತಿನ ಪಾಠಗಳು

ನಾರಾಯಣ ಶಾಸ್ತ್ರಿಯವರ ಸಂಸಾರ ಎಂ.ಟಿ.ಎಸ್. ಕಾಲೊನಿಗೆ ೧೯೬೪ರ ವೇಳೆಗೆ ಬಂದಿರಬೇಕು. ಅವರು ಕೇಶ್ವಾಪುರದಿಂದ ಕಾಲೊನಿಗೆ ಬಂದಾಗ ಮೊದಲು ಇದ್ದುದು ೮೬/ಬಿ ಮನೆಯಲ್ಲಿ. ನಾಲ್ಕು ಮನೆಗಳ ಬ್ಲಾಕ್. ಶಾಸ್ತ್ರಿಗಳ ನೆರೆಯಲ್ಲಿ ಇದ್ದವರು ಜಿ.ಹೆಚ್. ಕುಲಕರ್ಣಿ, ವಾಸು ವೈದ್ಯ ಮತ್ತು ಕೋಟಿ ಭಟ್ಟರು. ಅಲ್ಲಿಂದ ಮುಂದೆ ವಿಶಾಲವಾದ ಮೈದಾನ. ಕಲ್ಯಾಣಮಂಟಪ, ರಾಮನವಮಿ ಮಂಟಪ ಅವೆಲ್ಲ ನಿರ್ಮಾಣವಾದದ್ದು ಆಮೇಲಿನ ವರ್ಷಗಳಲ್ಲಿ. ಕಾಲೊನಿಯ ರಸ್ತೆಗಳು ಆಗಿನ್ನೂ ಟಾರು ಕಂಡಿರಲಿಲ್ಲ. ಅನಂತನ ತಮ್ಮ ನಂದಕುಮಾರ ಶಾಲೆಗೆ ಸೇರುವ ಹೊತ್ತಿಗೆ ಅವರು ೭೩/ಸಿ ಮನೆಗೆ ಸ್ಥಳಾಂತರಗೊಂಡರು. ನಂತರದ ಇಪ್ಪತ್ತು ವರುಷ ಅಲ್ಲಿಯೇ ಅವರ ವಾಸ್ತವ್ಯ. ಮುಂದೆ ನಾರಾಯಣ ಶಾಸ್ತ್ರಿಗಳು ಇಂದಿರಾ ಕಾಲೊನಿಯಲ್ಲಿ ಮನೆ ಕಟ್ಟಿ ಸ್ವಂತಮನೆಗೆ ಹೋಗುವವರೆಗೆ ಅವರು ಸುಮಾರು ೨೪ ವರುಷಗಳ ಕಾಲ ಎಂ.ಟಿ.ಎಸ್. ಕಾಲೊನಿಯೆಂಬ ಪ್ರಪಂಚದ ಭಾಗವಾಗಿದ್ದರು.


ಗಿರಿಜಾ ನಾರಾಯಣಶಾಸ್ತ್ರಿ ದಂಪತಿಯವರದು ಶಿಸ್ತುಬದ್ಧ ದಿನಚರಿ. ಬೆಳಗಿನ ಜಾವ ನಾಲ್ಕೂವರೆಗೆಲ್ಲ ಎದ್ದು ಬಿಡುವರು. ಗಿರಿಜಾ ಮನೆಯಂಗಳ ಗುಡಿಸಿ ನೀರು ಚಿಮುಕಿಸಿ ರಂಗೋಲಿಯಿಡುವರು. ಶಾಸ್ತ್ರಿಯವರ ಸ್ನಾನ ಸಂಧ್ಯಾವಂದನೆ ಮುಗಿಯುವ ಹೊತ್ತಿಗೆ ನಲ್ಲಿಯ ನೀರು ಬರತೊಡಗುವುದು. ಅವರಿಗೆ ನೀರು ಹಿಡಿದಿಡುವ ಕೆಲಸ. ಎಂಟೂವರೆಗೆಲ್ಲ ನಾರಾಯಣ ಶಾಸ್ತ್ರಿಗಳು ಕಚೇರಿಗೂ ಮಕ್ಕಳು ಶಾಲೆಗೂ ಹೊರಟುಬಿಡುತ್ತಿದ್ದರು. ಅಷ್ಟರೊಳಗೆ ಮೂವರಿಗೂ ತಿಂಡಿ ಸಿದ್ಧವಾಗಬೇಕು. ಆಮೇಲೆ ಗಿರಿಜಾ ಪೂಜಾಕಾರ್ಯದಲ್ಲಿ ತೊಡಗುವರು.

ಗಿರಿಜಾ ಶಾಸ್ತ್ರಿಯವರು ಶುಕ್ರವಾರಗಳಂದು ಲಲಿತಾ ಸಹಸ್ರನಾಮ ಪಾರಾಯಣ, ಕುಂಕುಮಾರ್ಚನೆಗಳನ್ನು ತಪ್ಪದೆ ಮಾಡುವರು. ಶಾಸ್ತ್ರಿಗಳು ರುದ್ರ ಚಮಕ ಹೇಳಿ ದೇವರ ಗೂಡಿನಲ್ಲಿದ್ದ ಸಾಲಿಗ್ರಾಮಗಳಿಗೆ ಅಭಿಷೇಕ ಮಾಡುತ್ತಿದ್ದರು. ಮಕ್ಕಳು ಶಾಲೆಗೆ ಹೋಗುವ ಹೊತ್ತಿಗೆ ಪೂಜೆ ಮುಗಿದು ಮಕ್ಕಳು ತೀರ್ಥ ತೆಗೆದುಕೊಂಡೇ ಮನೆಯಿಂದ ಹೊರಡುವುದು ರೂಢಿ.

ಅಪರಾಹ್ನ ಶಾಲೆಯಿಂದ ಸುವಾಸಿನಿ, ನಂದಕುಮಾರ್ ಮನೆಗೆ ಹಿಂತಿರುಗುವ ಹೊತ್ತಿಗೆ ತಾಯಿ ವಿಶ್ರಾಂತಿ ತೆಗೆದುಕೊಂಡಿರುತ್ತಿದ್ದರು. ಮಕ್ಕಳು ತಾವೇ ಬಡಿಸಿಕೊಂಡು ಊಟ ಮಾಡುವರು. ಅನಂತನಿಗೆ ಮಾತ್ರ ಎಂದೂ ಒಬ್ಬನೇ ಕುಳಿತು ಊಟಮಾಡಿ ಅಭ್ಯಾಸವಿಲ್ಲ; ಅವನಿಗೆ ಯಾರಾದರೊಬ್ಬರು ಬಡಿಸಬೇಕು.

ಮನೆಯಲ್ಲಿ ಸ್ವಚ್ಛತೆ ಮತ್ತು ಓರಣಕ್ಕೆ ಮಹತ್ತ್ವ. ದೊಡ್ಡವರಾಗಲಿ ಮಕ್ಕಳಾಗಲಿ ತಮ್ಮ ವಸ್ತುಗಳನ್ನು ಅಚ್ಚುಕಟ್ಟಾಗಿ ಇಟ್ಟಿರಬೇಕು. ಕತ್ತಲಲ್ಲಿ ಹುಡುಕಿದರೂ ಒಂದು ನಿರ್ದಿಷ್ಟ ವಸ್ತು ಮೊದಲು ಇಟ್ಟಲ್ಲಿಯೇ ಸಿಗುವಂತಿರಬೇಕು. ಇದು ಗಿರಿಜಾರವರು ಮಕ್ಕಳಿಗೆ ಹೇಳಿಕೊಡುತ್ತಿದ್ದ ಪಾಠ. ಬಟ್ಟೆಗಳನ್ನು ಒಣಹಾಕುವ ದಂಡದಲ್ಲೂ (ಎತ್ತರದಲ್ಲಿ ಕಟ್ಟಿದ ಕೋಲು) ಸುವ್ಯವಸ್ಥೆ. ಮಕ್ಕಳು ಅವರವರಿಗೆ ಮೀಸಲಾದ ದಂಡದ ಮೇಲೆಯೇ ಬಟ್ಟೆ ಒಣಗಿಸಿರತಕ್ಕದ್ದು. ಧರಿಸುವ ಮೇಲುಬಟ್ಟೆಯಿರಲಿ, ಒಳಬಟ್ಟೆಯಿರಲಿ ನಿರ್ದಿಷ್ಟ ಜಾಗಗಳಲ್ಲಿ ಒಂದರ ನಂತರ ಒಂದು ಸಿಗುವಂತೆ ಕ್ರಮಬದ್ಧವಾಗಿರಬೇಕು. ಈ ವಿಷಯಗಳೆಲ್ಲ ಮೇಲುನೋಟಕ್ಕೆ ಸಣ್ಣ ವಿಷಯಗಳೆಂಬಂತೆ ತೋರಿದರೂ ಬದುಕಿನ ಶಿಸ್ತಿನ ಪಾಠ ಕಲಿಯುವ ದೃಷ್ಟಿಯಿಂದ ಮಕ್ಕಳಿಗೆ ಬಹುಮುಖ್ಯವಾದ ನಿಯಮಗಳೆನಿಸಿದ್ದುವು.

ಎಂ.ಟಿ.ಎಸ್. ಕಾಲೊನಿಯಲ್ಲಿ ದೊಡ್ಡ ವಾಟರ್ ಟ್ಯಾಂಕ್ ಇದ್ದಿತು. ಅಲ್ಲಿಂದ ಪ್ರತಿದಿನ ನೀರು ಒದಗಿಸುತ್ತಿದ್ದರು. ಆದರೆ ಆ ದಿನಗಳಲ್ಲಿ ನಲ್ಲಿಯಲ್ಲಿ ಬರುತ್ತಿದ್ದುದು ಒಂದು ಬಗೆಯ ಕೆಂಪು ನೀರು. ಅದರಲ್ಲಿ ಬಿಳಿಯ ಬಟ್ಟೆಯನ್ನೇನಾದರೂ ನೇರವಾಗಿ ಅದ್ದಿದರೆ ಬಣ್ಣ ಹಾಕಿದ ಹಾಗೆ ಕೆಂಪಗಾಗಬೇಕು - ಅಂಥ ನೀರು. ಆ ನೀರು ಅಡುಗೆಗೂ ಕುಡಿಯುವುದಕ್ಕೂ ಯೋಗ್ಯವಾಗುವಂತೆ ನೀರಿಗೆ ಆಲಂ ಎಂದರೆ ಪಟಕಾರ ಅಥವಾ ಪಟಿಕವನ್ನು ಹಾಕಿ ಶುದ್ಧೀಕರಿಸುವುದೊಂದು ಕೆಲಸ.



**ಅನಂತಕುಮಾರ್ ಅವರು ತಮ್ಮ ಉಪನಯನದ ಸಂದರ್ಭದಲ್ಲಿ ಪೋಷಕರೊಡನೆ.**

ಆಮೇಲೆ ಶೋಧಿಸಿಯೇ ನೀರನ್ನು ಉಪಯೋಗಿಸುತ್ತಿದ್ದರು. ಕಾಲೊನಿಯ ಹತ್ತಿರವೇ ರೈಲ್ವೆ ಆಸ್ಪತ್ರೆಯಿದ್ದಿತು. ಅಲ್ಲಿಯ ನೀರು ಚೆನ್ನಾಗಿರುತ್ತಿತ್ತು. ಶಾಸ್ತ್ರಿಗಳ ಮನೆಗೆ ಯಾರಾದರೂ ಅತಿಥಿಗಳು ಬರುತ್ತಾರೆಂಬ ನಿರೀಕ್ಷೆಯಿದ್ದರೆ, ಆ ಆಸ್ಪತ್ರೆಯಿಂದ ಶುದ್ಧ ನೀರು ಹಿಡಿದುಕೊಂಡು ಬಿಂದಿಗೆಗಳಲ್ಲಿ ಹೊತ್ತು ತರುವರು. ಹೀಗೆ ನೀರು ಹೊರುವ ಕೆಲಸವನ್ನು ಅನಂತನೇ ಮಾಡುತ್ತಿದ್ದ. ಅವನು ಅರ್ಧ ದಾರಿ ಹೊತ್ತುತಂದ ಬಿಂದಿಗೆಯನ್ನು ಶಾಸ್ತ್ರಿಗಳೋ ನಂದಕುಮಾರನೋ ಮನೆಗೆ ತಂದಿಟ್ಟುಕೊಳ್ಳುತ್ತಿದ್ದರು.

ಇನ್ನು ಬಚ್ಚಲುಮನೆಯ ಒಲೆ ಉರಿಸುವುದಕ್ಕೆ ಕಟ್ಟಿಗೆ ಸಂಗ್ರಹಿಸಿಡಬೇಕಾಗಿತ್ತು. ಅದಕ್ಕೂ ಗಂಡುಮಕ್ಕಳು ಮುಂದಾಗುತ್ತಿದ್ದರು. ದೊಡ್ಡ ಕಟ್ಟಿಗೆಗಳನ್ನು ಅನಂತನೇ ತಂದು ಜೋಡಿಸುತ್ತಿದ್ದ. ತಮ್ಮನಿಗೆ ಹೊರಲು ಭಾರವಾಗದಂತಹ ಕಡ್ಡಿಸೌದೆಗಳನ್ನು ಕೊಟ್ಟು ತೆಗೆದುಕೊಂಡು ಹೋಗುವಂತೆ ಹೇಳುತ್ತಿದ್ದ. ಅನಂತನೇನೂ ತೀರಾ ದೊಡ್ಡವನಲ್ಲ. ಇನ್ನೂ ನಾಲ್ಕನೆಯ ತರಗತಿಯ ಹುಡುಗ. ಆದರೂ ತನ್ನ ಕಿರಿಯ ತಮ್ಮನಿಗೆ ಕಷ್ಟವಾಗಬಾರದೆಂಬ ಕಾಳಜಿ ಅತನಲ್ಲಿ ತುಂಬಿದ್ದುದು ಗಮನಾರ್ಹ. ಮನೆಯ ಹೆಣ್ಣುಮಗಳು ಸುವಾಸಿನಿಗೆ ಈ ಬಗೆಯ ಕೆಲಸಗಳಿಂದ ವಿನಾಯಿತಿಯಿರುತ್ತಿತ್ತು. ಮಕ್ಕಳು ಏನೂ ಕೆಲಸ ಮಾಡದೆ ಸುಮ್ಮನೆ ಓಡಾಡುತ್ತಿದ್ದರೆ ಶಾಸ್ತ್ರಿಗಳು ಎಚ್ಚರಿಸಿ ಬಯ್ಯುತ್ತಿದ್ದರು. ಕೆಲಸ ಮಾಡದಿದ್ದರೆ ಯಾರೂ ಉದ್ಧಾರವಾಗಲು ಸಾಧ್ಯವಿಲ್ಲ. ಕೆಲಸ ಮಾಡುತ್ತಿರಬೇಕು. ಹಾಗೆಂದು ಮನಸ್ಸಿಗೆ ಬಂದಂತೆ ಏನೋ ಮಾಡುವುದಲ್ಲ, ಅದರಲ್ಲೊಂದು ಶಿಸ್ತು, ನಿಯಮ ಇರಬೇಕು ಎಂದು ಪಾಠ ಹೇಳುತ್ತಿದ್ದರು.

ಶಾಸ್ತ್ರಿಗಳಾಗಲಿ ಅವರ ಪತ್ನಿಯಾಗಲಿ ಸಂಸಾರದ ಜಂಜಾಟಗಳೇನೇ ಇದ್ದರೂ ದಿನಚರ್ಯೆಯನ್ನು ತಪ್ಪಿಸಿದವರಲ್ಲ. ಒಳ್ಳೆಯ ಪುಸ್ತಕಗಳನ್ನು ಓದುವ ಹವ್ಯಾಸವನ್ನೂ ರೂಢಿಸಿಕೊಂಡಿದ್ದರು. ಬೆಳಗಿನ ಜಾವ ಎದ್ದು ಪುಸ್ತಕವಾಚನ ಮಾಡಿ ಉಳಿದ ಕೆಲಸಗಳತ್ತ ಗಮನಹರಿಸುವರು. ಅವರಿಂದಲೇ ಪುಸ್ತಕಗಳನ್ನು ಓದುವ ಹವ್ಯಾಸ ಮಕ್ಕಳಿಗೂ ರೂಢಿಯಾಗಿ ಬಂದಿತ್ತು. ಅನಂತ ಗ್ರಂಥಭಂಡಾರದಿಂದ ತರುವ ಪುಸ್ತಕಗಳನ್ನು ತಂದೆತಾಯಿಯರೂ ಓದುವುದಿತ್ತು. ಅವನು ಗ್ರಂಥಾಲಯಕ್ಕೆ ಹಿಂತಿರುಗಿಸಿಬಿಡುವ ಮೊದಲೇ ಓದಬೇಕೆಂಬ ಅವಸರದಲ್ಲಿ ಅಪರರಾತ್ರಿ ಮೂರು ಗಂಟೆಗೇ ಎದ್ದು ಓದಿ ಮುಗಿಸುತ್ತಿದ್ದರು. ಡಿ.ವಿ.ಜಿಯವರ ಮಂಕುತಿಮ್ಮನ ಕಗ್ಗ, ಬಾಬು ಕೃಷ್ಣಮೂರ್ತಿಯವರು ಬರೆದ ಅಜೇಯ ಮೊದಲಾದವು ಅವರ ಮೆಚ್ಚಿನ ಪುಸ್ತಕಗಳಲ್ಲಿ ಸೇರಿದ್ದುವು. ಹಿರಿಯ ನಾಗರಿಕರಿಗಾಗಿ ಕಾಲೊನಿಯಲ್ಲಿ ಪ್ರಾರಂಭವಾದ ಗ್ರಂಥಭಂಡಾರ, ವಾಚನಾಲಯಗಳ ಸ್ಥಾಪನೆಯಲ್ಲಿ ಶಾಸ್ತ್ರಿದಂಪತಿಯ ಪಾತ್ರವೂ ಇದ್ದಿತೆಂದು ಬೇರೆ ಹೇಳಬೇಕಾಗಿಲ್ಲ.


ನಾರಾಯಣ ಶಾಸ್ತ್ರಿಯವರ ಓದಿನ ಹವ್ಯಾಸವನ್ನು ಕುರಿತು ಪ್ರಸ್ತಾಪಿಸುತ್ತ ಖ್ಯಾತ ವಿದ್ವಾಂಸರಾದ ಶ್ರೀ ಟಿ.ವಿ.ವೆಂಕಟಾಚಲಶಾಸ್ತ್ರಿಗಳು, "ನಾರಾಯಣ ಶಾಸ್ತ್ರಿಗಳು ನನ್ನೊಡನೆ ಕನ್ನಡದ ಆ ಕಾಲದ ಕಾದಂಬರಿಗಳ ಬಗ್ಗೆ ಚರ್ಚೆ ಮಾಡ್ತಾ ಇದ್ದ ವಿಚಾರ ನನಗೀಗಲೂ ನೆನಪಿನಲ್ಲಿದೆ. ಪಾನ್ಯಂ ಸುಂದರಶಾಸ್ತ್ರಿಗಳು ಬರೆದ ಶೂದ್ರಕ ಎಂಬ ಕಾದಂಬರಿ ಮತ್ತು ಸಾಧು ನಂಜುಂಡ ಶಾಸ್ತ್ರಿಗಳು ರಚಿಸಿದ ನಾಯಕಮಣಿ ಎಂಬ ಕಾದಂಬರಿಗಳ ಬಗೆಗೆ ನಾವು ಚರ್ಚಿಸಿದ್ದೆವು" ಎಂದು ಹೇಳಿಕೊಂಡಿದ್ದಾರೆ.

ಗಿರಿಜಾಶಾಸ್ತ್ರಿಯವರು ಪ್ರತಿದಿನ ಮಕ್ಕಳನ್ನು ಕೂಡಿಸಿಕೊಂಡು ರಾಮಾಯಣ, ಮಹಾಭಾರತದ ಕಥೆಗಳನ್ನು ಓದಿಸುತ್ತಿದ್ದರು. ಬೆಳಗ್ಗೆಯೋ ಸಂಜೆಯೋ ಮಕ್ಕಳು ಓದಿದ ಕಥೆಯನ್ನು ಇನ್ನೊಮ್ಮೆ ವಿವರಿಸಿ ಹೇಳಬೇಕಿತ್ತು. ಪ್ರಾಥಮಿಕ ಶಾಲೆಯ ಮಕ್ಕಳು ಏನು ಅರ್ಥ ಹೇಳಿಯಾರು? ಆದರೂ ಅವರಿಗೆ ತಿಳಿದುದನ್ನು ಅವರು ಹೇಳಬೇಕು. ಆಮೇಲೆ ತಪ್ಪಾದ ಕಡೆ ಅದು ಹೀಗಿರಬಹುದಲ್ಲಾ ಎಂದು ಸೂಚನೆ ಕೊಡುತ್ತಲೇ ತಾಯಿ ಕಥೆಯನ್ನು ಮುಂದುವರಿಸುವಂತೆ ಮಕ್ಕಳನ್ನು ಪ್ರೋತ್ಸಾಹಿಸುತ್ತಿದ್ದರು. ತಾವು ಓದಿದ ಭಾಗ ತಮಗೆ ಅರ್ಥವಾಗಿದೆಯೋ ಇಲ್ಲವೋ ಪರೀಕ್ಷಿಸಿಕೊಂಡು ಪುಸ್ತಕವನ್ನು ಓದಿ ಮನನ ಮಾಡಿಕೊಳ್ಳುವುದು ಹೇಗೆ ಎಂಬುದನ್ನು ಮಕ್ಕಳಿಗೆ ಆಕೆ ಮನವರಿಕೆ ಮಾಡಿಕೊಡುತ್ತಿದ್ದ ಪರಿ ಅನನ್ಯವಾಗಿತ್ತು.

ಇದಲ್ಲದೆ, ತಾವು ಓದಿದ ಯಾವುದಾದರೂ ಪುಸ್ತಕದ ಸ್ವಾರಸ್ಯಕರವಾದ ಭಾಗವನ್ನು ಆರಿಸಿ ಅದನ್ನು ಓದಬೇಕೆಂದು ತಾಯಿ ಮಕ್ಕಳಿಗೆ ಹೇಳುವುದಿತ್ತು. ಅಡುಗೆಮನೆಯಲ್ಲಿ ಪುಟ 4 ರಲ್ಲಿ ಮುಂದುವರೆದಿದೆ

# ವೃತ್ತಿ ಶಿಕ್ಷಣ: ಕ್ಯಾಪಿಟೇಷನ್ ಪಿಡುಗು

**(ಅನಂತಕುಮಾರರು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ ಕರ್ನಾಟಕದ ಶಿಕ್ಷಣರಂಗದ ದುರವಸ್ಥೆಗೆ ಹಿಡಿದ ಕೈಗನ್ನಡಿಯಾಗಿ ಪ್ರಕಟಿಸಿದ ಕರಾಳಪತ್ರದ ಭಾಗಗಳನ್ನು ಪ್ರತಿಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ - ಸಂ)**




**ಪ್ರತಿಭಾ ರಫ್ತಿನ ಟೊಳ್ಳುತನ :** ಹೆಚ್ಚು ವೈದ್ಯಕೀಯ ಮತ್ತು ಅಭಿಯಾಂತ್ರಿಕ ಮಹಾವಿದ್ಯಾಲಯಗಳು ಮತ್ತು ಅತೀ ಹೆಚ್ಚಿನ ಸಂಖ್ಯೆಯ ಪದವೀಧರರಿಂದ ಪ್ರತಿಭೆ ರಫ್ತಾಗುವುದೆಂದು ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ (೧೯೮೬). ಜನರ ಕಣ್ಣೆದುರಿಗೆ ಭ್ರಮಾಲೋಕವೊಂದನ್ನವರು ಸೃಷ್ಟಿಸಿದ್ದಾರೆ. ಈ ವಾದ ತನ್ನಲ್ಲೇ ಪೊಳ್ಳುತನ ಹೊಂದಿರುವುದಲ್ಲದೇ ಅನೇಕ ಪ್ರಶ್ನೆಗಳಿಗೆ ಕಾರಣವಾಗುತ್ತದೆ. ◆ನಿಜಕ್ಕೂ ಪ್ರತಿಭಾವಂತರಲ್ಲದ, ಹಣದ ಶಕ್ತಿಯಿರುವ ಜನರಿಗಾಗಿ ಇಂಜಿನಿಯರಿಂಗ್-ವೈದ್ಯಕೀಯ ಸೌಲಭ್ಯಗಳನ್ನೇಕೆ ತೊಡಗಿಸಬೇಕು? ◆ದೇಶಾದ್ಯಂತ ಮತ್ತು ಹೊರ ದೇಶಗಳಿಗಾಗಿ ಬೇಕಾಗುವ ತಾಂತ್ರಿಕ ವೈದ್ಯಕೀಯ ಪದವೀಧರರನ್ನು ಕರ್ನಾಟಕವೇ ಸಿದ್ಧ ಮಾಡಬೇಕೆ? ◆ಪ್ರತಿಭೆ ನಿಜಕ್ಕೂ ರಫ್ತಾಗುವುದೇ? ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ ಪ್ರತಿ ವರ್ಷ ಹೊರಬರುವ ಪದವೀಧರರಲ್ಲಿ ಪ್ರತಿಭೆಯ ಅರ್ಹತೆಯ ಆಧಾರದ ಮೇಲೆ ಶಿಕ್ಷಣ ಪಡೆದವರೆಷ್ಟು? ಹಣ ಸುರಿದು ಪದವಿ ಕೊಳ್ಳಲು ಹೊರಟವರೆಷ್ಟು ? ರಾಜ್ಯ ಸರ್ಕಾರವೇ ಈ ಸಂಖ್ಯೆಗಳನ್ನು ತುಲನೆ ಮಾಡಿ ನೋಡಲಿ. ಈಗಿರುವ ವೈಪರೀತ್ಯಕ್ಕೆ ಯಾರು ಕಾರಣ? ◆ಪ್ರತಿಭೆ ಬಗ್ಗೆ ಆಸಕ್ತಿ ಇದ್ದರೆ ಸರ್ಕಾರವೇ ಸಾಧನ ಸಂರಚನೆ ಸಹಿತದ ಕಾಲೇಜು ಏಕೆ ಪ್ರಾರಂಭಿಸಬಾರದು? ◆ರಫ್ತು ಮಾಡಲು ಕೆಲ ಪ್ರತಿಶತ ವಿದ್ಯಾರ್ಥಿಗಳು ಕರ್ನಾಟಕದವರೇ ಅಲ್ಲ. ಹೊರ ರಾಜ್ಯದಿಂದ ಹಣ, ವಿದ್ಯಾರ್ಥಿಗಳನ್ನು ಆಮದು ಮಾಡಿಕೊಂಡು ಅನಂತರ ರಫ್ತು ಮಾಡಿದ ಒಣ ಸಮಾಧಾನ ಏಕೆ?

**ಕ್ಯಾಪಿಟೇಶನ್ ನಿಷೇಧದ ಕಾನೂನು:** ಶೇಕಡವಾರು ವ್ಯಾಪಾರ- ಕ್ಯಾಪಿಟೇಶನ್ ಶುಲ್ಕವನ್ನು ತೊಡೆಯುವ ಆಶ್ವಾಸನೆಗಳನ್ನೀಯುತ್ತಿದ್ದ ಸರಕಾರಗಳು ಜಾತಿಗುಂಪು ರಾಜಕೀಯ ಒತ್ತಡಗಳಿಗೆ ಮಣಿದು ಕಾಲಕ್ರಮೇಣ 'ಪ್ರತಿಭೆ ಸೀಟು' (Merit Seat) ಗಳನ್ನು ಶೇಕಡವಾರು ಜಾಸ್ತಿ ಮಾಡುತ್ತಾ ಕ್ಯಾಪಿಟೇಶನ್ ಪಿಡುಗನ್ನು ಉಚ್ಚಾಟಿಸುವ ಯೋಜನೆಯನ್ನು ಪ್ರಕಟಿಸಿ ಹಮ್ಮಿಕೊಂಡು ಕೊನೆಗೆ ದುರಾಶೆಯಿಂದ, ಭ್ರಷ್ಟತೆಯಿಂದ ಈ ಯೋಜನೆಯನ್ನು ಬದಿಗೊತ್ತಿವೆ. ಜನತಾ ಪಕ್ಷದ ಸರಕಾರ ಮಾತ್ರ ಮೊದಲು ಭಾರೀ ಡಂಗುರ ಹೊಡೆದು ನಂತರ ಅದಕ್ಕೆ ತದ್ವಿರುದ್ಧವಾಗಿ ನಡೆದುದು ಶಿಕ್ಷಣ ರಂಗದಲ್ಲಿ ಮೌಲ್ಯಗಳ ಕುರಿತು ಹಂಬಲಿಸಿದವರಿಗೆ ನಿರಾಶೆ ತಂದಿತು. ◆1981ರಲ್ಲಿ ರಾಜ್ಯ ಸರಕಾರ ಹೊರಡಿಸಿದ ಆಜ್ಞೆಯ ಪ್ರಕಾರ ಪ್ರತಿವರ್ಷ ಶೇ. 20ರಷ್ಟು ಕ್ಯಾಪಿಟೇಶನ್ ಸೀಟುಗಳು ಸರಕಾರೀ (ಪ್ರತಿಭೆ) ಸೀಟುಗಳಾಗಿ ಮಾರ್ಪಟ್ಟು, 5 ವರ್ಷಗಳಲ್ಲಿ ಕ್ಯಾಪಿಟೇಶನ್ ಹಾವಳಿ ದೂರವಾಗಬೇಕು (ಹೈಕೋರ್ಟಿನ ಆಜ್ಞೆಯಿಂದಾಗಿ ಸರಕಾರದ ಈ ಆಜ್ಞೆ ಜಾರಿಗೆ ಬಂದಿಲ್ಲವೆನ್ನುವ ಮಾತಿದೆ). ◆1983ರಲ್ಲಿ ಜಾರಿಗೆ ಬಂದ ಕರ್ನಾಟಕ ಕ್ಯಾಪಿಟೇಶನ್ ಶುಲ್ಕ ರದ್ದತಿ ಆಜ್ಞೆಯಂತೆ ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಲಭ್ಯವಾಗುವ ಉಳಿದ ಸೀಟುಗಳನ್ನು ಶೇ. 20ರಂತೆ ಹೆಚ್ಚಿಸುತ್ತಾ ಹೋಗುವುದು. 1987-88ರ ವೇಳೆಗೆ ರಾಜ್ಯದ ಎಲ್ಲಾ ಮೆಡಿಕಲ್ ಸೀಟುಗಳು ಕ್ಯಾಪಿಟೇಶನ್ ಮುಕ್ತ ಪ್ರತಿಭೆಗೆ ಮೀಸಲು ಆಗುವುದು. ಆದರೆ ಹಿಂದಿನ ಇಂಜಿನಿಯರಿಂಗ್ ಸೀಟುಗಳಿಗೆ ಸಂಬಂಧಿಸಿದ ಆಜ್ಞೆಯಂತೆ ಇದರಲ್ಲೂ ಗೊಂದಲ. ನ್ಯಾಯಾಲಯ ಒಂದೆಡೆ ತಡೆಹಾಕಿದರೆ, ರಾಜ್ಯ ಸರ್ಕಾರದ ಮನೋದೌರ್ಬಲ್ಯ-ಇಚ್ಛಾಶಕ್ತಿಯ ಕೊರತೆ ಇನ್ನೊಂದು ಬಹು ಪ್ರಮುಖ ತಡೆ. 1986-87ರ ಸಾಲಿನ ಆರೋಗ್ಯ ಸಚಿವ ಶ್ರೀ ಹೆಚ್. ಟಿ. ಕೃಷ್ಣಪ್ಪನವರು ಮೊದಲು ಮೌಲ್ಯಾಧಾರಿತ ಹೇಳಿಕೆಗಳನ್ನಿತ್ತು ನಂತರ ಖಾಸಗೀ ಕಾಲೇಜುಗಳಲ್ಲಿ ಸರಕಾರೀ ಕೋಟಾವನ್ನು ಶೇ. 55 ರಿಂದ 50ಕ್ಕೆ ಇಳಿಸಿದ್ದಲ್ಲದೇ ಖಾಸಗೀ ಮಹಾ ವಿದ್ಯಾಲಯಗಳಿಗೆ ತಲಾ 10 ಪರ್ಸೆಂಟ್ ಸೀಟುಗಳನ್ನು ವರವನ್ನಾಗಿತ್ತು ಕ್ಯಾಪಿಟೇಶನ್ ಭೂತವನ್ನು ಮತ್ತೆ ತಾಂಡವ ನೃತ್ಯವಾಡಲಿಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ. ವೈದ್ಯಕೀಯ ಶಿಕ್ಷಣದಲ್ಲಿ 83ರಲ್ಲಿ 394ರಷ್ಟಿದ್ದ ಕ್ಯಾಪಿಟೇಶನ್ ಸೀಟುಗಳು ಮತ್ತು 85ರಲ್ಲಿ 572ಕ್ಕೇರಿದೆ. 1986-87ನೇ ಸಾಲಿಗೆ 6555 ಇಂಜಿನಿಯರಿಂಗ್ ಸೀಟುಗಳು ಕ್ಯಾಪಿಟೇಶನ್ ಶುಲ್ಕಕ್ಕೆ ಮೀಸಲು.

ನ್ಯಾಯಾಲಯದ ಆಜ್ಞೆಯಿಂದ ತಮ್ಮ ಸದುದ್ದೇಶ ಈಡೇರಲಿಲ್ಲ ಎಂದೇನೋ ರಾಜ್ಯ ಸರ್ಕಾರ ಅಸಹಾಯಕತೆಯ ದನಿ ಎತ್ತಬಹುದು. ಆದರೆ ಹೊಸ ಸೀಟು ಶುಲ್ಕಾಧಾರಿತ ಕಾಲೇಜುಗಳನ್ನು ಆರಂಭಿಸಲು ಯಾವ ನ್ಯಾಯಾಲಯ, ಯಾವ ಆಯೋಗ, ಯಾವ ಶಿಕ್ಷಣ ತಜ್ಞ ಕೇಳಿದ್ದರು? ಇಂಜಿನಿಯರಿಂಗ್, ಮೆಡಿಕಲ್ ಪದವೀಧರರ ಸಂಖ್ಯೆ ಅನಗತ್ಯವಾಗಿ ಹೆಚ್ಚುತ್ತಿರುವುದು ತಿಳಿದೂ ಒಂದೊಂದು ಕಾಲೇಜಿನಲ್ಲೂ ಸೀಟುಗಳ ಸಂಖ್ಯೆ ಹೆಚ್ಚಿಸಿದ್ದರ ಔಚಿತ್ಯವೇನು? ಒಂದೆಡೆ ಸೀಟು ಶುಲ್ಕ ಕಡಿಮೆ ಮಾಡುತ್ತಾ, ಇಂಥ ಕಾಲೇಜುಗಳ ಸಂಖ್ಯೆ ಕಡಿಮೆ ಮಾಡುವೆವೆಂದು ಕೋರ್ಟಿಗೆ ತಿಳಿಸಿ, ಇನ್ನೊಂದೆಡೆ ಇಂಥ ಕಾಲೇಜುಗಳು ತುಂಬಾ ಅಗತ್ಯವೆಂದು ಹೇಳಿಕೆ ನೀಡುತ್ತಿರುವುದನ್ನು ಗಮನಿಸಿದರೆ ಮುಖ್ಯ ಮಂತ್ರಿಗಳು ಒಂದೋ ಜನರಿಗೆ ಸುಳ್ಳು ಆಮಿಷ ತೋರುತ್ತಿದ್ದಾರೆ ಅಥವಾ ಸರ್ಕಾರದ ಒಳ ಉದ್ದೇಶ ಬಚ್ಚಿಟ್ಟು ನ್ಯಾಯಾಲಯಕ್ಕೆ ಸುಳ್ಳು ಹೇಳಿಕೆ ನೀಡಲಾಗಿದೆ ಎಂಬುದು ನಿಜ. ಹಾಗಿದ್ದರೆ ಯಾರಿಗೆ ವಂಚನೆ ಮಾಡಲಾಗಿದೆ? **(ಅಂಕಿ-ಅಂಶಗಳನ್ನು 1980ರಲ್ಲಿದ್ದಂತೆ ಪರಿಗಣಿಸಬೇಕಾಗಿ ಕೋರಿಕೆ-ಸಂ)**

## ಶಿಸ್ತಿನ ಪಾಠಗಳು

(ಪುಟ 3 ರಿಂದ)

ತಾವು ಕೆಲಸಮಾಡುವ ಕಟ್ಟೆಯ ಒಂದು ಬದಿಯಲ್ಲಿ ಮಕ್ಕಳಲ್ಲೊಬ್ಬರನ್ನು ಎತ್ತಿ ಕೂರಿಸಿ, ಪುಸ್ತಕದ ಭಾಗವನ್ನು ಗಟ್ಟಿಯಾಗಿ ಓದುವಂತೆ ಹೇಳುತ್ತಿದ್ದರು. ಗ್ರಂಥದ ಸಾರಸತ್ತ್ವವನ್ನು ಮಕ್ಕಳು ಅರಿತುಕೊಳ್ಳುವುದರ ಜೊತೆಗೆ ವಾಚನ ನೈಪುಣ್ಯವನ್ನೂ ಕಲಿಯಲೆಂಬ ಹಂಬಲ ಅವರದ್ದು.

ಮಕ್ಕಳು ತಿಂಡಿಗೋ ಊಟಕ್ಕೋ ಕುಳಿತಾಗ ತಾಯಿ ಕೆಲವು ಸಾಂದರ್ಭಿಕ ಕತೆಗಳನ್ನು ಹೇಳುವರು. ಕೆಲವೊಮ್ಮೆ ತಮ್ಮ ಪೂರ್ವಿಕರ ಬಗೆಗಾಗಲಿ, ಶಾಸ್ತ್ರಿಯವರ ತಂದೆತಾಯಿಗಳ ವಿಚಾರವನ್ನಾಗಲಿ ತಾನು ಆ ಹಿರಿಯರ ಒಡನಾಟದಲ್ಲಿ ಕಲಿತ ಜೀವನದ ಪಾಠಗಳನ್ನಾಗಲಿ ಉದಾಹರಿಸಿ ವರ್ಣಿಸುತ್ತಿದ್ದರು; ಜೀವನದ ಸನ್ನಿವೇಶಗಳನ್ನು ಎದುರಿಸಿ ಗೆಲ್ಲುವ ಬಗೆ ಹೇಗೆ, ಸರಿ ತಪ್ಪುಗಳ ನಿರ್ಣಯ ಹೇಗೆ ಎಂಬುದನ್ನು ಸರಳವಾಗಿ ತಿಳಿಸಿ ಹೇಳುವರು.

ಆಂಟಿ ಸ್ಕೂಲ್‌ನಲ್ಲಿ ಪಾಠ ಹೇಳಿಕೊಡುತ್ತಿದ್ದವರು ಕಾಲೊನಿಯಲ್ಲಿದ್ದ ದೊಡ್ಡ ಹೆಣ್ಣುಮಕ್ಕಳೇ. ಲತಾ. ಮುಕ್ತಾ, ಸುಧಾ, ವನಜಾ ಮೊದಲಾದವರು. ಒಂದೊಂದು ದಿನ ಒಬ್ಬೊಬ್ಬರು ಬಂದು ತಲಾ ಒಂದು ಗಂಟೆ ಮಕ್ಕಳ ಆಟಪಾಟದ ಮೇಲ್ವಿಚಾರಣೆ ನಡೆಸುವರು. ಶಾಲೆ ನಡೆಸುವುದಕ್ಕಾಗಿ ಮಕ್ಕಳಿಂದ ಸಂಗ್ರಹಿಸಿದ್ದ ಹಣವನ್ನೇ ಈ ತಾತ್ಕಾಲಿಕ ಶಿಕ್ಷಕಿಯರಿಗೆ ಗಿರಿಜಾ ಸಂಭಾವನೆಯಾಗಿ ಹಂಚುತ್ತಿದ್ದರು. ಒಮ್ಮೊಮ್ಮೆ ಈ ಶಿಕ್ಷಕಿಯರಲ್ಲಿ ಯಾರೂ ಬಂದಿಲ್ಲದೇ ಇದ್ದಾಗ ಗಿರಿಜಾ ಶಾಸ್ತ್ರಿಯವರು ತಮ್ಮ ಮಕ್ಕಳಲ್ಲೇ ಒಬ್ಬರಿಗೆ ಪಾಠಮಾಡುವಂತೆ ಆದೇಶಿಸುವುದಿತ್ತು. ನೀವು ಮೂವರೂ ಒಂದೊಂದು ದಿನ ಒಬ್ಬೊಬ್ಬರು ಬಂದು ಒಂದು ಗಂಟೆ ಪಾಠ ಮಾಡಿ, ನಿಮಗೆ ತಿಂಗಳಿಗೆ ಎಂಟು ರೂಪಾಯಿ ಕೊಡುತ್ತೇನೆ. ಪೆನ್ನೋ ಪೆನ್ಸಿಲ್ಲೋ ಕೊಂಡುಕೊಳ್ಳೋದಿಕ್ಕೆ ಅನುಕೂಲ ಆಗುತ್ತೆ ಎಂದು ಹೇಳಿ ಪ್ರೋತ್ಸಾಹಿಸುತ್ತಿದ್ದರು. ಹೀಗೆ, ಸ್ವಾವಲಂಬನೆಯ ಪಾಠದ ಜೊತೆಗೆ ದುಡಿಮೆಯ ಮಹತ್ತ್ವವನ್ನು ಕಲಿಯುವ ಮಾದರಿಯನ್ನೂ ಅವರು ತೋರಿಸಿಕೊಡುತ್ತಿದ್ದರು.



ಶಾಸ್ತ್ರಿ ದಂಪತಿ ತಮ್ಮ ಮೂವರು ಮಕ್ಕಳಿಗೂ ಅವರವರ ಹುಟ್ಟುಹಬ್ಬದ ದಿನದಂದು ಭಗವದ್ಗೀತೆಯ ಒಂದೊಂದು ಪ್ರತಿ ತಂದುಕೊಟ್ಟಿದ್ದರು. ಶ್ಲೋಕದ ಜೊತೆಗೆ ಅದರ ಅರ್ಥವನ್ನೂ ಓದಿಕೊಳ್ಳಲು ಅನುಕೂಲವಾಗಿದ್ದ ಪುಸ್ತಕ. ಪ್ರತಿದಿನ ಗೀತೆಯ ಯಾವುದಾದರೂ ಐದು ಶ್ಲೋಕಗಳನ್ನು ಓದಿ ನಿತ್ಯ ಕೆಲಸದಲ್ಲಿ ತೊಡಗಬೇಕು ಎಂದು ತಾಯ್ತಂದೆಯರು ಕೊಟ್ಟ ಸೂಚನೆಯನ್ನು ಮಕ್ಕಳು ಜೀವಮಾನದುದ್ದಕ್ಕೂ ನಿರಂತರವಾಗಿ ಪಾಲಿಸತೊಡಗಿದರು.

(ಮುಂದುವರಿಯುವುದು)

# "ಪರಿಪೂರ್ಣತೆಯ ಮಾರ್ಗದರ್ಶಕ"



## ಸಿ. ಟಿ. ರವಿ, ಬಿ. ಜೆ. ಪಿ. ನಾಯಕರು

ಅನಂತಕುಮಾರರು ನಮ್ಮ ನಾಯಕರು; ನನ್ನಂತಹ ನೂರಾರು ಜನರನ್ನು ಬೆಳೆಸಿದವರು. ವಯಸ್ಸಿನಲ್ಲಿ ಹಿರಿಯರಾಗಿದ್ದ ಅವರ ಮಾರ್ಗದರ್ಶನದಲ್ಲಿ ಬೆಳೆದವರ ಪಟ್ಟಿ ಬಹಳ ದೊಡ್ಡದಿದೆ. ರಾಜ್ಯದ ಮೂಲೆಮೂಲೆಗಳಲ್ಲಿದ್ದ ನನ್ನಂತಹ ಸಾಮಾನ್ಯ ಕಾರ್ಯಕರ್ತರನ್ನು ಗುರುತಿಸಿ, ಬೆಳೆಸಿದ್ದು ಅವರ ವಿಶೇಷವಾದ ಗುಣ.

ಅನಂತಕುಮಾರರು, ರಾಜ್ಯ ಮತ್ತು ದೇಶದ ಮಾಹಿತಿ ಕುರಿತ ಒಂದು ವಿಶ್ವಕೋಶವೇ ಆಗಿದ್ದವರೆಂದರೆ ಅತಿಶಯವಲ್ಲ. ಕಾವೇರಿ ವಿವಾದ, ಕೃಷ್ಣಾ ಕೊಳ್ಳದ ವಿಷಯ, ಭಾಷೆ ಇಲ್ಲವೇ ಗಡಿ ವಿವಾದ, ಅಭಿವೃದ್ಧಿಯ ಯೋಜನೆಗಳು ಮುಂತಾದ ಎಲ್ಲ ವಿಷಯಗಳ ಬಗ್ಗೆ ಮಾಹಿತಿ ಸದಾ ಅವರ ನಾಲಿಗೆಯ ತುದಿಯಲ್ಲೇ ಇರುತ್ತಿತ್ತು. ರಾಜ್ಯದ ಬಿಜೆಪಿ ಬೆಳವಣಿಗೆಯಲ್ಲಿ ಅನಂತಕುಮಾರರು ತಂತ್ರಾಂಶವಾದರೆ, ಯಡಿಯೂರಪ್ಪನವರು ಯಂತ್ರಾಂಶದಂತೆ ಹೊಂದಾಣಿಕೆಯಿಂದ ಕೆಲಸ ಮಾಡುತ್ತಿದ್ದರು. ಇಬ್ಬರೂ ರಾಜ್ಯದಲ್ಲಿ ರಾಜಕೀಯ ಪರಿವರ್ತನೆಗೆ ಕಾರಣರಾದರು. ಕರ್ನಾಟಕದ ಹಿತಾಸಕ್ತಿಯನ್ನು ಕೇಂದ್ರವಾಗಿರಿಸಿಕೊಂಡು ವಿರೋಧಿಗಳೂ ಒಪ್ಪುವಂತೆ ಅನಂತಕುಮಾರರು ರಾಜಕಾರಣ ಮಾಡಿದರು.

ಅನಂತಕುಮಾರರು, 1986ರಲ್ಲಿ ಎಬಿವಿಪಿಯಿಂದ ಮುಕ್ತರಾಗಿ ಭಾರತೀಯ ಜನತಾ ಪಾರ್ಟಿಗೆ ಬಂದಾಗ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದರು. ಆಗ ನಮ್ಮ ಪಕ್ಷದಿಂದ ಗೆದ್ದದ್ದು ಯಡಿಯೂರಪ್ಪ ಮತ್ತು ವಸಂತ ಬಂಗೇರ ಇಬ್ಬರೇ. ಆದರೆ ವೈಯಕ್ತಿಕ ವರ್ಚಸ್ಸನ್ನು ಹೊಂದಿದ ಭಾವೂರಾವ್ ದೇಶಪಾಂಡೆ, ಕರಂಬಳ್ಳಿ ಸಂಜೀವ ಶೆಟ್ಟಿ, ವಿ. ಎಸ್. ಆಚಾರ್ಯ, ಮಲ್ಲಿಕಾರ್ಜುನಯ್ಯ ಮುಂತಾದ ಅನೇಕ ನಾಯಕರು ರಾಜ್ಯದಲ್ಲಿದ್ದರು. ಹಾಗೆ ನೋಡಿದರೆ, ಆ ಕಿರಿಯ ವಯಸ್ಸಿಗೇ ನಮ್ಮ ರಾಜ್ಯದ ಎಲ್ಲ 224 ಕ್ಷೇತ್ರಗಳ ಬಗ್ಗೆ ಯಾವ ದಾಖಲೆಗಳನ್ನೂ ನೋಡದೆ ಮಾತಾಡುವ ಸಾಮರ್ಥ್ಯ ಇದ್ದಿದ್ದು ಅನಂತಕುಮಾರರಿಗೆ ಮಾತ್ರ. ಯುವ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಉಮಾಭಾರತಿಯವರ ಸಭೆ ಒಮ್ಮೆ ಶಿವಮೊಗ್ಗದಲ್ಲಿ ಏರ್ಪಾಡಾಗಿತ್ತು. ಅಂದು ನಾವು 4-5 ಜನ ಜ್ಯುವೆಲ್ ರಾಕ್ ಹೊಟೇಲ್ ನಲ್ಲಿ ಊಟ ಮಾಡಿ, ಮಲಗಿಕೊಳ್ಳುವುದಕ್ಕೆ ಐ.ಬಿ.ಗೆ ಬಂದೆವು. ಅಲ್ಲಿ ಅನಂತಕುಮಾರರು ಶತಪಥ ವಾಕ್ ಮಾಡುತ್ತಿದ್ದರು. ಇವರ ಕಣ್ಣು ತಪ್ಪಿಸಿ ಒಳಗೊಳಗೆ ಸಂದಿಯಲ್ಲಿ ಹೋಗಿ ರೂಂ ಸೇರಿಕೊಳ್ಳಬೇಕು ಎಂದು ನಮ್ಮ ಹಂಚಿಕೆ. ಆದರೆ ಅವರು ನನ್ನನ್ನು ಗಮನಿಸಿ, "ನೀನು ಶಿವಮೊಗ್ಗಕ್ಕೆ ಏನಾಗಿ ಬಂದಿದ್ದೀ?" ಎಂದು ಕೇಳಿದರು. 'ಬಿಜೆಪಿ ರಾಜ್ಯ ಯುವ ಮೋರ್ಚಾ ಕಾರ್ಯದರ್ಶಿಯಾಗಿ ಬಂದಿದ್ದೇನೆ" ಎಂದು ಉತ್ತರಿಸಿದೆ. "ಅಂದಮೇಲೆ, ನೀನು ಅಧಿಕೃತವಾಗಿ ಪಾರ್ಟಿಯ ಜವಾಬ್ದಾರಿ ತೆಗೆದುಕೊಂಡು ಬಂದಿದ್ದೀಯ ಎಂದಾಯಿತು. ಎಲ್ಲಿಗೆ ಹೋಗಿದ್ದೆ?" ಎಂದು ಕೇಳಿದರು. ನಾನು "ಊಟ ಮಾಡಲು ಹೋಗಿದ್ದೆ" ಎಂದು ಹೇಳಿದೆ. ಅದಕ್ಕೆ ಅವರು "ಪಾರ್ಟಿ ಎಲ್ಲಿ ಅಧಿಕೃತ ವ್ಯವಸ್ಥೆ ಮಾಡಿರುತ್ತೋ ಅಲ್ಲಿಯೇ ಊಟ ಮಾಡಬೇಕು. ಖಾಸಗಿಯಾಗಿ ಬಂದಾಗ ಎಲ್ಲಿ ಬೇಕಾದರೂ ಊಟ ಮಾಡಬಹುದು" ಎಂದು ಹೇಳಿದ್ದರು. ಹೀಗೆ ಅವರು ಪ್ರತಿ ಹಂತದಲ್ಲಿಯೂ ನಮ್ಮ ತಪ್ಪು ನಡೆಗಳನ್ನು ಎತ್ತಿ ತೋರಿಸಿ ತಿದ್ದುವಂತಹ ಗುಣ ಹೊಂದಿದ್ದರು.

ಒಂದು ದಿನ ಅನಂತಕುಮಾರರು ಹಾಗೂ ವೆಂಕಯ್ಯ ನಾಯ್ಡು ಅವರು ಕುಮಾರಕೃಪದಲ್ಲಿದ್ದಾಗ ನನ್ನನ್ನು ಕರೆದು "ನೀನು ಗ್ರ್ಯಾಂಡ್ ಆಗಿ ಇರಬೇಕು. ದೂರದಲ್ಲಿದ್ದರೂ ನಿನ್ನನ್ನು ಗುರುತಿಸಿ ಸಿ.ಟಿ. ರವಿ ಎಂದು ಹೇಳುವಂತಿರಬೇಕು" ಎಂದಿದ್ದರು. ಅದಕ್ಕೆ ಯಡಿಯೂರಪ್ಪನವರ ಉದಾಹರಣೆ ಕೊಡುತ್ತ, "ಸಫಾರಿ ಎಂದರೆ ಯಡಿಯೂರಪ್ಪ, ಯಡಿಯೂರಪ್ಪ ಅಂದರೆ ಸಫಾರಿ. ಹೀಗೆ ಒಂದೇ ರೀತಿಯ ಡ್ರೆಸ್ ಇರಬೇಕು" ಅಂದರು. ಅವತ್ತಿನಿಂದಲೇ ನಾನು ಜೀನ್ಸ್‌ನಿಂದ ಜುಬ್ಬಾಕ್ಕೆ ಬದಲಾದೆ. ವೇಷಭೂಷಣದ ಪಾಠವಲ್ಲದೆ, ಅಧ್ಯಯನ ಮಾಡಿಕೊಂಡು ಮಾತನಾಡುವ ಶಿಸ್ತನ್ನೂ ಅವರು ನಮಗೆ ಕಲಿಸಿದರು.







"ತೊರೆ ನಂಬು ಇಲ್ಲವೇ ದೊರೆ ನಂಬು, ನಾನ್ಯಾರನ್ನು ನಂಬಲಿ" ಎಂದು ನಮ್ಮಮ್ಮ ಹೇಳಿದ್ದನ್ನು ನಾನು ಅವರಿಗೆ ಹೇಳಿದ್ದೆ. ಅದಕ್ಕೆ ಅವರು "ಕಟ್ಟಾಳುವಾದರೂ ಇಲ್ಲ. ಕಡುಜಾಣನಾದರೂ ಇಲ್ಲ, ಕಾಡಿದರೂ ಇಲ್ಲ. ಬೇಡಿದರೂ ಇಲ್ಲ, ಸೃಷ್ಟೀಶ ಕಾಗಿನೆಲೆಯಾದಿಕೇಶವ ಕೊಟ್ಟರೆ ಉಂಟು, ಕೊಡದಿದ್ದರೆ ಇಲ್ಲ, ಪ್ರಯತ್ನ ಮಾತ್ರ ನಮ್ಮದು, ಚೆನ್ನಾಗಿ ಮಾಡಬೇಕು, ಕಷ್ಟಪಟ್ಟು ಮಾಡಬೇಕು. ಪರಿಪೂರ್ಣವಾಗಿ ಮಾಡಬೇಕು. ಉಳಿದಿದ್ದೆಲ್ಲ ದೈವೇಚ್ಛೆ" ಎಂದು ವಿವರಿಸಿ ಹೇಳಿದ್ದರು.

ಅನಂತಕುಮಾರರು ಬರೀ ಬಿಜೆಪಿ ನಾಯಕರಾಗಿರದೆ ಇಡೀ ರಾಜ್ಯಕ್ಕೆ ನೇತೃತ್ವ ಕೊಟ್ಟಿದ್ದರು. ಕಾಫಿ ಡೇ ಮಾಲೀಕ ಸಿದ್ಧಾರ್ಥ ಹೆಗ್ಡೆ ಅನಂತಕುಮಾರರಿಗೆ ಆತ್ಮೀಯರಾಗಿದ್ದರು. ಅವರ ಮೂಲಕ ಒಂದು ಕಾಫಿ ಏಜೆನ್ಸಿ ಕೊಡಿಸಿ ಎಂದು ನಾನು ಅನಂತಕುಮಾರರನ್ನು ಕೇಳಿದ್ದೆ. ಅನಂತಕುಮಾರರು ಸಿದ್ಧಾರ್ಥರಿಗೆ ಫೋನ್ ಮಾಡಿದ್ದರು. ಸಿದ್ಧಾರ್ಥರ ಆಫೀಸಿಗೆ ಹೋದಾಗ ಅವರು "ನಿನಗೆ ಏಜೆನ್ಸಿ ಕೊಡುವುದು ದೊಡ್ಡದಲ್ಲ, ಆದರೆ ಏಜೆನ್ಸಿ ತೆಗೆದುಕೊಂಡ ಕೂಡಲೇ ನಿನ್ನ ಮನಸ್ಸು ವಿಚಲಿತವಾಗುತ್ತದೆ, ನೀನು ರಾಜಕೀಯವಾಗಿ ಮುಂದೆ ಹೋಗಬೇಕು. ನಿನಗೆ ತಾವು ಸಪೋರ್ಟ್ ಮಾಡುವುದಾಗಿ ಅನಂತಕುಮಾರರು ಹೇಳಿದ್ದಾರೆ" ಎಂದು ತಿಳಿಸಿದರು. ಈ ರೀತಿಯಾಗಿ ಅನಂತಕುಮಾರ್ ನಮ್ಮ ಬಗ್ಗೆ ವೈಯಕ್ತಿಕ ಕಾಳಜಿ ವಹಿಸುತ್ತಿದ್ದರು. ನನ್ನಂತೆಯೇ ಸಿದ್ಧಾರ್ಥ ಹೆಗ್ಡೆಯವರಿಗೂ ಅವರು ಬದುಕಿರುವ ತನಕ ಮಾರ್ಗದರ್ಶನ ನೀಡಿದ್ದರು.

1988-89 ರಲ್ಲಿ ನಾನು ಬೂತ್ ಕಮಿಟಿ ಅಧ್ಯಕ್ಷನಾಗಿದ್ದರೂ ಅನಂತಕುಮಾರರೊಂದಿಗೆ ನೇರ ಸಂಪರ್ಕವಿರಲಿಲ್ಲ. ನಾವು ಕೆಳ ಹಂತದಲ್ಲಿ ಕೆಲಸ ಮಾಡುತ್ತಿದ್ದೆವು. ರಾಷ್ಟ್ರೀಯ ನಾಯಕರಾಗಿದ್ದ ಅವರು ನಮಗೆ ಸಿಗುತ್ತಿರಲಿಲ್ಲ. ಆದರೆ, ವಿಶ್ವೇಶ್ವರ ಹೆಗಡೆ ಕಾಗೇರಿ, ಹಿರೇಂದ್ರ ಷಾ, ಕೃಷ್ಣಭಟ್ಟರು ನಮ್ಮ ಸಂಪರ್ಕಕ್ಕೆ ಬರುತ್ತಿದ್ದರು. 1990ರ ನಂತರವೇ ಅನಂತಕುಮಾರರು ನನ್ನ ನೇರ ಸಂಪರ್ಕಕ್ಕೆ ಬಂದಿದ್ದು. 2004ರಲ್ಲಿ ಅವರು ರಾಜ್ಯ ಬಿಜೆಪಿ ಅಧ್ಯಕ್ಷರಾಗಿದ್ದಾಗ ರಾಜಕೀಯ ಧ್ರುವೀಕರಣ ಮಾಡಿದರು; ಪಕ್ಷವನ್ನು ಕಾಂಗ್ರೆಸ್ ಮತ್ತು ಜನತಾ ಪಕ್ಷಗಳಿಗೆ ಪರ್ಯಾಯವಾಗಿ ಬೆಳೆಸಿದರು.

ಯಡಿಯೂರಪ್ಪನವರ ಜನಸಂಪರ್ಕ ಮತ್ತು ಅನಂತಕುಮಾರರ ಸಾಮಾಜಿಕ ಹೊಂದಾಣಿಕೆಗಳ ಮೂಲಕ ಪಕ್ಷವು ಸರ್ವವ್ಯಾಪಿಯಾಗಿ, ಸರ್ವಸ್ಪರ್ಶಿಯಾಗಿ ಬೆಳೆಯಿತು. ಮೊದಲ ಬಾರಿಗೆ ನಾವು 79 ಸ್ಥಾನಗಳನ್ನು ಗಳಿಸಿದೆವು. ಮಿತ್ರಪಕ್ಷ ಜೆಡಿಯು 5 ಸ್ಥಾನಗಳನ್ನು ಪಡೆದಿತ್ತು. 1996ರಲ್ಲಿ ಮೊದಲ ಬಾರಿಗೆ ಚುನಾವಣೆ ಎದುರಿಸಿದ ಅನಂತಕುಮಾರರು ಪ್ರತಿಕೂಲ ಪರಿಸ್ಥಿತಿಯಲ್ಲೂ ಗೆದ್ದು ಬಂದಿದ್ದರು.

ಅಟಲ್ ಜೀ - ಅನಂತಕುಮಾರ್, ಅದ್ವಾನಿ - ಅನಂತಕುಮಾರ್ ಜೋಡಿ ಇದ್ದ ಹಾಗೇ ಮೋದಿ - ಅನಂತಕುಮಾರ್ ಜೋಡಿಯೂ ಇತ್ತು. ಅಟಲ್‌ಜೀಯವರು ಜನಸಮೂಹವನ್ನು ಸಮ್ಮೋಹನಗೊಳಿಸುವ ಶಕ್ತಿ ಹೊಂದಿದ್ದರೆ ಅದ್ವಾನಿಯವರು ಕಾರ್ಯಕರ್ತರನ್ನು ಬೆಳೆಸುತ್ತಿದ್ದರು. ಅದ್ವಾನಿಯವರ ರಾಜಕೀಯ ವಿಚಾರ ವೇದಿಕೆಯಲ್ಲಿ ಅನಂತಕುಮಾರ್ ಸೇರಿದ್ದರು. ಅದ್ವಾನಿಯವರು ಅನಂತಕುಮಾರರ ಅಭಿಪ್ರಾಯಗಳನ್ನು ಕೇಳಿಯೇ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರಂತೆ. 2004ರಲ್ಲಿ ಅಟಲ್‌ಜೀಯವರ ಮಾತಿಗೆ ಗೌರವ ನೀಡಿ ಕರ್ನಾಟಕಕ್ಕೆ ಬಂದು ಪಕ್ಷದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು.

"ಜಾತಿ ಒಂದು ವಾಸ್ತವ, ಜಾತಿ ಬಿಟ್ಟು ರಾಜಕಾರಣ ಸಾಧ್ಯವಿಲ್ಲ. ಆದರೆ ಜಾತೀಯತೆಯ ರಾಜಕಾರಣ ಮಾಡಬಾರದು" ಎಂದು ಜಾತಿ ಮತ್ತು ಜಾತೀಯತೆಗಳ ನಡುವಣ ವ್ಯತ್ಯಾಸವನ್ನು ಅವರು ವಿವರಿಸುತ್ತಿದ್ದರು. ಇಂದು ಪಕ್ಷದಲ್ಲಿ ಬಿಕ್ಕಟ್ಟು ಬಂದಾಗ "ಅನಂತಕುಮಾರರು ಇದ್ದಿದ್ರೆ" ಎಂದು ನೆನಪಿಸಿಕೊಳ್ಳುತ್ತೇವೆ. ಅನಂತಕುಮಾರರ ಭಾಷಣ ಜಗನ್ನಾಥರಾವ್ ಜೋಶಿ ಅವರ ಶೈಲಿಯನ್ನು ಹೋಲುತ್ತಿತ್ತು. ಅವರ ಭಾಷಣಗಳಲ್ಲಿ ಟೀಕೆ ಇರುತ್ತಿತ್ತು, ಆದರೆ ಅವುಗಳಿಂದ ಯಾರಿಗೂ ನೋವಾಗುತ್ತಿರಲಿಲ್ಲ, ಬದಲಾಗಿ ಟೀಕೆಗೊಳಗಾದವರನ್ನು ಚಿಂತನೆಗೆ ಒಳಪಡಿಸುತ್ತಿತ್ತು. ಭಾರತೀಯ ಸಂಸ್ಕೃತಿಯ ಆಧಾರದಲ್ಲಿ ಜನರನ್ನು ಒಂದುಗೂಡಿಸುವ ಕೆಲಸವನ್ನು ಅವರು ಮಾಡಿದರು. ಅದೇ ಅವರ ವಿಶೇಷತೆ.

# ಚುನಾವಣೆಗಳಲ್ಲಿ ಅನಂತ ಯಶೋಗಾಥೆ

ಪುಟ 1 ರಿಂದ ಹೋರಾಟವನ್ನು ಗಮನಿಸಬೇಕು. ಜೊತೆಗೆ ಪಕ್ಷವನ್ನು ಜನರೆಡೆಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಅನೇಕ ಯಾತ್ರೆಗಳನ್ನು ಅವರು ಸಂಘಟಿಸಿದರು. ಶಿಸ್ತುಬದ್ಧ ಕಾರ್ಯಕರ್ತರು, ವ್ಯವಸ್ಥಿತ ಪ್ರಚಾರ, ನಿಧಿಸಂಗ್ರಹ - ಇದು ಚುನಾವಣೆಯನ್ನು ಗೆಲ್ಲಲು ಅನಂತಕುಮಾರರು ಬಳಸಿದ ತ್ರಿವಳಿಸೂತ್ರ. ಈ ಸೂತ್ರದ ಮೂಲಕ ೧೯೯೪ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದಿಂದ ೪೦ ಜನರು ಆಯ್ಕೆಯಾದರು. ತನ್ಮೂಲಕ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಒಬ್ಬರಾದರೂ ಶಾಸಕರು ಇರುವಂತಾಗಿ ಮುಂದಿನ ಲೋಕಸಭಾ ಚುನಾವಣೆಗೆ ಇದು ನೆರವಾಯಿತು. ೧೯೯೬ರ ಲೋಕಸಭಾ ಚುನಾವಣೆಯ ಹೊತ್ತಿಗೆ ಅನೇಕ ಹೊಸಬರು ಪಕ್ಷವನ್ನು ಕೂಡಿಕೊಂಡರು. ಅವರಲ್ಲಿ ಹುಬ್ಬಳ್ಳಿಯ ಉದ್ಯಮಿ, ವಿಜಯ ಸಂಕೇಶ್ವರ ಪ್ರಮುಖರು. ಅನಂತಕುಮಾರರು ಮೂಲತಃ ಹುಬ್ಬಳ್ಳಿಯವರು; ಬೆಂಗಳೂರನ್ನು ಕಾರ್ಯಕ್ಷೇತ್ರವಾಗಿ ಆರಿಸಿಕೊಂಡಿದ್ದರು. ೧೯೯೬ರಲ್ಲಿ ಪಕ್ಷದಿಂದ ಸ್ಪರ್ಧಿಸಲು ಕೆಲವರು ಉತ್ಸಾಹ ತೋರಿಸಿದ್ದರು. ಅನಂತಕುಮಾರರಿಗೆ ಯಾವುದೋ ಒಂದು ಕ್ಷೇತ್ರದಲ್ಲಿ ಸ್ಪರ್ಧಿಸುವ ಇರಾದೆಗಿಂತ ಇಡೀ ರಾಜ್ಯದಲ್ಲಿ ಪಕ್ಷದ ಹೊಣೆಗಾರಿಕೆಯೇ ಮುಖ್ಯವಾಗಿತ್ತು. ಆದರೂ ಪಕ್ಷದ ವರಿಷ್ಠರು ಅವರಿಗೆ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ನಾಮಪತ್ರ ಸಲ್ಲಿಸುವಂತೆ ಸೂಚಿಸಿದರು. ಅದೂ ಅನಂತಕುಮಾರರು ತಮ್ಮ ತಾಯಿಯವರ ವೈಕುಂಠ ಸಮಾರಾಧನೆಯಲ್ಲಿ ನಿರತರಾಗಿದ್ದಾಗ! ಅವರು ಇದನ್ನು ತಮ್ಮ ತಾಯಿಯ ಆಶೀರ್ವಾದ ಹಾಗೂ ನಿರ್ದೇಶನ ಎಂದೇ ತಿಳಿದು ಕಣಕ್ಕೆ ಇಳಿದರು. ಬೆಂಗಳೂರು ದಕ್ಷಿಣ ಕ್ಷೇತ್ರವೆಂದರೆ - ಸ್ವಾತಂತ್ರ್ಯ ಹೋರಾಟಗಾರರು, ನ್ಯಾಯಮೂರ್ತಿಗಳು, ಮುಖ್ಯಮಂತ್ರಿಗಳು, ಆರ್ಥಿಕ ತಜ್ಞರು ಮುಂತಾದವರು ಸ್ಪರ್ಧಿಸಿದ್ದ ಪ್ರತಿಷ್ಠಿತ ಕ್ಷೇತ್ರ. ಅನಂತಕುಮಾರರ ಇದಿರಾಳಿಯಾಗಿದ್ದ ಶ್ರೀಮತಿ ವರಲಕ್ಷ್ಮೀ ಗುಂಡೂರಾವ್ ಅವರಿಗೆ ಪಕ್ಷದ ಬಲದೊಂದಿಗೆ ಪತಿಯ ನಿಧನದ ಅನುಕಂಪದ ಅಲೆಯ ಬೆಂಬಲವಿತ್ತು.

ಇಡೀ ರಾಜ್ಯದ ಹೊಣೆ ಹೊತ್ತಿದ್ದ ಅನಂತಕುಮಾರರು ತಮ್ಮ ಸ್ವಂತ ಕ್ಷೇತ್ರಕ್ಕೆ ಲಕ್ಷ್ಯನೀಡಲು ಸಾಧ್ಯವಾಗಿದ್ದು ಕೇವಲ ನಾಲ್ಕು ದಿನಗಳು. ಆದರೂ ಕಾರ್ಯಕರ್ತರ ಬೆಂಬಲದಿಂದ ೨೨೦೦೦ ಮತಗಳ ಅಂತರದಿಂದ ಜಯಗಳಿಸಿದರು. ಪಕ್ಷದ ಸಾಧನೆಯೂ ಆರಕ್ಕೇರಿತು. ಅಲ್ಲಿಂದ ಮುಂದೆ ಅನಂತಕುಮಾರರು ಇದೇ ಕ್ಷೇತ್ರದಿಂದ ಸತತವಾಗಿ ಐದುಬಾರಿ ಚುನಾಯಿತರಾದರು.

೧೯೯೮ರ ಚುನಾವಣೆಯಲ್ಲಿ ಅನಂತಕುಮಾರರ ಎದುರು ಕಾಂಗ್ರೆಸಿನಿಂದ ಡಿ. ಪಿ. ಶರ್ಮ ಎಂಬ ಶ್ರೀಮಂತ ಉದ್ಯಮಿಯೂ ಪ್ರಬಲ ಸಮುದಾಯದ ಬೆಂಬಲ ಹೊಂದಿದ್ದ ವಿ ಸೋಮಣ್ಣ ಜನತಾ ದಳದಿಂದಲೂ ಸ್ಪರ್ಧಿಸಿದ್ದರು. ಇಂತಹ ವಿರೋಧದ ನಡುವೆಯೂ ಅನಂತಕುಮಾರರು ಶೇ. ೫೩.೮೯ ಮತಗಳಿಸಿ ವಿಜಯದ ನಗೆ ಬೀರಿದರು. ಅತಿ ಕಿರಿಯ ಮಂತ್ರಿ ಎಂಬ ಹೆಗ್ಗಳಿಕೆಯೊಂದಿಗೆ ವಾಜಪೇಯಿಯವರ ಸಂಪುಟದಲ್ಲಿ ಸಚಿವರಾದರು. ೧೯೯೯ರಲ್ಲಿ ಮತ್ತೆ ಚುನಾವಣೆ. ಈ ಸಲ ಬಿ.ಕೆ. ಹರಿಪ್ರಸಾದ್ ಅನಂತಕುಮಾರರ ಪ್ರತಿಸ್ಪರ್ಧಿಯಾಗಿ ಸೋತವರು. ಅನಂತಕುಮಾರರು ಗಳಿಸಿದ ಮತದ ಪ್ರಮಾಣ ಶೇ. ೫೦.೯೯. ಮುಂದಿನ ನಾಲ್ಕುವರ್ಷಗಳಲ್ಲಿ ಅವರ ಕಾರ್ಯವ್ಯಾಪ್ತಿ ರಾಷ್ಟ್ರಮಟ್ಟಕ್ಕೆ ವಿಸ್ತರಿಸಿತು. ಆದರೆ, ಕರ್ನಾಟಕದಲ್ಲಿ ಪಕ್ಷದ ಸಾಧನೆ ಗಣನೀಯವಾಗಿ ಕ್ಷೀಣಿಸಲಿದೆ ಎಂಬ ವರದಿಯ ಹಿನ್ನೆಲೆಯಲ್ಲಿ ಕೇಂದ್ರ ನಾಯಕರು ಅವರನ್ನು ರಾಜ್ಯದ ಚುಕ್ಕಾಣಿ ಹಿಡಿಯುವಂತೆ ಕೋರಿಕೊಂಡರು. ಆಗ ರಾಜ್ಯಕ್ಕೆ ಮರಳಿದ ಅನಂತಕುಮಾರ್ ಮಾಡಿದ ಮೊದಲ ಕೆಲಸ, ತಾನು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯಲ್ಲ ಎಂದು ರಾಜ್ಯ ನಾಯಕರಿಗೆ ಮನವರಿಕೆ ಮಾಡಿದ್ದು. ನೆಲಕಚ್ಚಿದ್ದ ಪಕ್ಷವು ನಂತರದ ಕೇವಲ ೧೧ ತಿಂಗಳ ಅವಧಿಯಲ್ಲಿ ಮೈಕೊಡವಿ ಮೇಲೆದ್ದು ವಿಧಾನಸಭೆಯಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ೨೦೦೪ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಅನಂತಕುಮಾರ್ ಸೇರಿದಂತೆ ೧೮ ಸಂಸದರು ಕರ್ನಾಟಕದಿಂದ ಆಯ್ಕೆಯಾದರು. ಆಗ ಅವರ ಎದುರು ಎಂ. ಕೃಷ್ಣಪ್ಪ ಮತ್ತು ಚಿತ್ರನಟಿ ಜಯಂತಿ ಸ್ಪರ್ಧಿಸಿದ್ದರು. ತ್ರಿಕೋಣೀಯ ಸ್ಪರ್ಧೆಯಲ್ಲಿ ಅವರ ಜಯ ಸುಲಭಸಾಧ್ಯವಾಯಿತು.

ಮುಂದಿನ ಹತ್ತುವರ್ಷಗಳವರೆಗೆ ದೇಶದಲ್ಲಿ ಕಾಂಗ್ರೆಸ್ ರಾಜ್ಯಭಾರ. ಅಧಿಕಾರವಿಲ್ಲದಿದ್ದಾಗ ಕಾರ್ಯಕರ್ತರು ಉತ್ಸಾಹ ಕಳೆದುಕೊಳ್ಳದಿರುವುದು ಮುಖ್ಯ. ಈ ನಿಟ್ಟಿನಲ್ಲಿ ಅನಂತಕುಮಾರ್ ಅನೇಕ ಯಾತ್ರೆಗಳನ್ನು, ಪ್ರತಿಭಟನೆಗಳನ್ನು ಸಂಘಟಿಸಿ ಕಾರ್ಯಕರ್ತರನ್ನು ನಿರಂತರ ಚಟುವಟಿಕೆಗಳಲ್ಲಿ ತೊಡಗಿಸಿದರು. ೨೦೦೯ರ ಚುನಾವಣೆಯ ಹೊತ್ತಿಗೆ ಅಟಲ್ ಅನಾರೋಗ್ಯಪೀಡಿತರಾಗಿದ್ದರು. ಅದ್ವಾನಿಯವರ ಹೆಸರಿಗೆ ಜಿನ್ನಾ ಕಲಂಕ ಹತ್ತಿಕೊಂಡಿತ್ತು. ಜೊತೆಗೆ ಅಷ್ಟು ವರ್ಷಗಳ ಅಧಿಕಾರದ ನಂತರ ಮತದಾರರಲ್ಲಿ ಉಂಟಾಗುವ ಅಸಮಾಧಾನ! ಇವೆಲ್ಲದರ ಜೊತೆಗೆ, ಕೃಷ್ಣಭೈರೇಗೌಡರ ಪ್ರಬಲ ಪ್ರತಿಸ್ಪರ್ಧೆ ಮತ್ತು ಸ್ವಜಾತಿಬಾಂಧವರಾದ ಕೆ.ಇ. ರಾಧಾಕೃಷ್ಣ ಮತ್ತು ಕ್ಯಾ. ಗೋಪೀನಾಥ್ ಕೂಡಾ ಕಣದಲ್ಲಿ. ಇಷ್ಟಾದರೂ, ಕೆಲವು ಆತಂಕದ ಕ್ಷಣಗಳ ನಡುವೆಯೂ ಅನಂತಕುಮಾರ್ ಶೇ. ೪೮.೨ ಮತಗಳಿಕೆಯೊಂದಿಗೆ ವಿಜಯಿಯಾದರು.

೨೦೦೯ರ ಚುನಾವಣೆಯು ಅನಂತಕುಮಾರರ ಯೋಚನಾಕ್ರಮವನ್ನೇ ಬದಲಿಸಿತು. ಅವರು ಕ್ಷೇತ್ರದ ಮೇಲೆ ಹೆಚ್ಚಿನ ನಿಗಾ ವಹಿಸಿದರು. ಕಾರ್ಯಕರ್ತರ ಪಡೆಯನ್ನು ಕಟ್ಟಿದರು. ನಕಾರಾತ್ಮಕ ಭಾವನೆಗಳನ್ನು ಶಮನಗೊಳಿಸಲು ಕ್ರಮ ತೆಗೆದುಕೊಂಡರು. ಕ್ಷೇತ್ರದಲ್ಲಿ ಹಲವಾರು ಸಾಮಾಜಿಕ ಕೆಲಸಗಳನ್ನು ಕೈಗೆತ್ತಿಕೊಂಡರು. ೧೦೦ ಕಡೆ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರಗಳಲ್ಲಿ ಸುಮಾರು ೩೫೦೦೦ ಜನರು ಪ್ರಯೋಜನ ಪಡೆದರು. ಮಕ್ಕಳಿಗೆ ಬಿಸಿಯೂಟ, ಸಸ್ಯಾಗ್ರಹ ಮುಂತಾದ ಹಲವಾರು ಕಾರ್ಯಕ್ರಮಗಳ ಮೂಲಕ ಪ್ರತಿಯೊಂದು ವಾರ್ಡ್ ಮಟ್ಟದಲ್ಲಿ ಜನರನ್ನು ತಲುಪಿದರು. ಪ್ರಣಾಳಿಕೆಯಲ್ಲಿ ಜನರ ಅಗತ್ಯಗಳ ಪ್ರಸ್ತಾಪ ಇರಬೇಕೆಂದು ಈ ನಿಟ್ಟಿನಲ್ಲಿ ಸಮೀಕ್ಷೆ ನಡೆಸಿದರು. ಜೊತೆಗೆ ಮೋದಿಯವರ ನಾಯಕತ್ವ. ಆಧಾರ್ ಯಶಸ್ಸಿನ ರೂವಾರಿ ನಂದನ್ ನಿಲೇಕಣಿ ಅವರಿಗೆ ಎದುರಾಳಿ. ಇಷ್ಟಾದರೂ ಅನಂತಕುಮಾರ್ ೨೨೦೦೦೦ ಮತಗಳ ದಾಖಲೆ ಅಂತರದಿಂದ ಜಯಗಳಿಸಿದರು. ಆ ಚುನಾವಣೆಯಲ್ಲಿ ಕನಿಷ್ಠ ಹತ್ತು ಮತಗಟ್ಟೆಗಳಲ್ಲಿ ಶೇ. ನೂರು ಮತಗಳನ್ನು ಅನಂತಕುಮಾರರೇ ಗಳಿಸಿದ್ದರು!

ಇದು ಅನಂತಕುಮಾರರ ಚುನಾವಣಾ ರಾಜಕೀಯದ ಸ್ಥೂಲನಕ್ಷೆ ಮಾತ್ರ. ಈ ಕುರಿತು ವಿವರವಾದ ಅಧ್ಯಯನ ನಡೆಯಬೇಕು. ಅದರಿಂದ ಚುನಾವಣಾ ಕಾರ್ಯತಂತ್ರಗಳ ವಿವಿಧ ಆಯಾಮಗಳ ಕುರಿತು ಒಂದು ಅಧಿಕೃತ ದಾಖಲೆ ಸೃಷ್ಟಿಯಾದೀತು. ಅದು ಮುಂದಿನ ಪೀಳಿಗೆಗಳಿಗೆ ಮಾರ್ಗದರ್ಶಿಯಾಗಿಯೂ ಉಪಯೋಗವಾದೀತು.

ಪುಟ 1 ರಿಂದ

# ಸಮಾಜಮುಖಿ ಅದಮ್ಯಚೇತನದ "ಸೇವಾಯಜ್ಞ"

ಈ ಪಂಚಭೂತಗಳಿಗೆ ಕಾರಣಕರ್ತರು ದೇವತೆಗಳು. ಈ ಪಂಚಮಹಾಭೂತಗಳನ್ನು ಬಳಸಿಯೂ ಅವುಗಳನ್ನು ಇನ್ನೂ ಉತ್ತಮ ಸ್ಥಿತಿಯಲ್ಲಿ ಬಿಟ್ಟುಹೋಗಬೇಕು. ದೇವಯಜ್ಞದ ಮೂಲಕ ಆ ದೇವತೆಗಳಿಗೆ ಆಹುತಿಗಳನ್ನು ನೀಡಬೇಕು. ಯಜ್ಞಕ್ಕೆ ಬೇಕಾದ ಪರಿಕರಗಳನ್ನು ಕಾಪಾಡುವುದು, ಪರಿಸರದ ಸಂರಕ್ಷಣೆ ಮುಂತಾದ ಎಲ್ಲವೂ ದೇವಯಜ್ಞದ ಭಾಗಗಳೇ. “ಶರೀರಮಾದ್ಯಂ ಖಲು ಧರ್ಮಸಾಧನಂ” - ಎಲ್ಲ ಧರ್ಮಸಾಧನೆಗೆ ಕಾರಣವಾದ ಶರೀರವನ್ನು ಕೊಟ್ಟವರಿಗೆ ನಾವು ಋಣಿಯಾಗಿರಬೇಕು – ಇದು ಪಿತೃಯಜ್ಞ. ಭೂತ ಯಜ್ಞ ಎಂದರೆ ಪ್ರಾಣಿಪಕ್ಷಿಗಳಿಗೆಲ್ಲ ಆಹಾರ ಕೊಡುವುದು. ಪ್ರಾಣಿಗಳಲ್ಲಿರುವ ಪಾಲ್ಯವರ್ಗ, ಪೋಷ್ಯವರ್ಗಗಳಿಗೆ ರಕ್ಷಣೆ ನೀಡುವುದು ಭೂತಯಜ್ಞ. ಅದಮ್ಯಚೇತನದ ಅನ್ನದಾನ, ಪ್ಲೇಟ್ ಬ್ಯಾಂಕ್ ಎಲ್ಲವೂ ಮನುಷ್ಯಯಜ್ಞಕ್ಕೆ ಉತ್ತಮ ಉದಾಹರಣೆಗಳು. ಮನೆಗೆ ಬರುವ ಅತಿಥಿಗಳಿಗೆ ಮೊದಲು ಬಡಿಸಿ ನಂತರ ಊಟ ಮಾಡಬೇಕು. “ಯೇ ಪಚಂತ್ಯಾತ್ಮಕಾರಣಾತ್” - ಯಾರು ತಮಗಾಗಿ ಅಡುಗೆ ಮಾಡಿಕೊಳ್ಳುತ್ತಾರೋ ಅವರು “ಭುಂಜತೇ ತೇ ತ್ವಘಂ ಪಾಪಾ” – ಅವರು ತಮ್ಮ ಪಾಪವನ್ನೇ ಬೇಯಿಸಿಕೊಂಡು ತಿನ್ನುತ್ತಾರೆ. ಪೂರ್ವಸೂಚನೆ ಇಲ್ಲದೇ ಬರುವವರು, ಪರಿಚಯವೇ ಇಲ್ಲದವರು ಅತಿಥಿಗಳು. ಊರಿಗೆ ಬಂದ ಅತಿಥಿಗಳನ್ನು ಕರೆದು ತಂದು ಊಟಬಡಿಸಬೇಕು; ನಂತರವೇ ನಾವು ಊಟಮಾಡಬೇಕು. ಇಂದು ಹಾಗೆ ಅನ್ನದಾನ ಮಾಡುವುದು ಸಾಧ್ಯವಾಗದಿದ್ದರೆ ಸಾಮೂಹಿಕ ಅನ್ನದಾನ ನಡೆಯುವ ಕಡೆ ದ್ರವ್ಯದಾನ, ಶ್ರಮದಾನ ಮಾಡಬಹುದು. ಇದು ಮನುಷ್ಯಯಜ್ಞ.

“ಅಧ್ಯಾಪನಂ ಬ್ರಹ್ಮಯಜ್ಞ” ಎಂದು ಮನುಸ್ಮೃತಿ ಹೇಳುತ್ತದೆ. ನಮಗೆ ಗೊತ್ತಿರುವುದನ್ನು ಹೇಳಿಕೊಡಬೇಕು. ಋಷಿಗಳಿಂದ ನಮಗೆ ಪ್ರಾಪ್ತವಾಗಿರುವ ಜ್ಞಾನವನ್ನು ಸ್ವಾಧ್ಯಾಯದ ಮೂಲಕ ಮೌಲ್ಯವರ್ಧನೆ ಮಾಡಿ ಪ್ರವಚನ ಮಾಡುವ ಮೂಲಕ ಋಷಿಋಣವನ್ನು ತೀರಿಸಬಹುದು. ಈ ಐದು ಯಜ್ಞಗಳಲ್ಲಿ ಪಡೆದುಕೊಂಡದ್ದಕ್ಕಿಂತ ಹೆಚ್ಚು ಸಂದಾಯ ಮಾಡಿ ಆಯಾ ಋಣಗಳಿಂದ ಮುಕ್ತರಾಗಬಹುದು. ಇದು ಭಾರತೀಯ ಸಂಸ್ಕೃತಿ.

ನಾವು ನಮ್ಮ ಬಗ್ಗೆಯೇ ಯೋಚನೆ ಮಾಡುವಾಗ ದೇಹದ ಜೀವಕೋಶಗಳು ಒಂದು ರೀತಿಯಲ್ಲಿ ವರ್ತಿಸಿದರೆ ಬೇರೆಯವರ ಕುರಿತು ಯೋಚಿಸುವಾಗ ಅವು ವರ್ತಿಸುವ ರೀತಿಯೇ ಬೇರೆ ಎಂದು ವಿಜ್ಞಾನಿಗಳು ಹೇಳುತ್ತಿದ್ದಾರೆ. ನಾವು ತ್ಯಾಗಶೀಲರಾದಷ್ಟೂ ನಮ್ಮ ರಕ್ತಕಣಗಳು ವೃದ್ಧಿಯಾಗುತ್ತವೆ, ಆರೋಗ್ಯಪೂರ್ಣವಾಗುತ್ತವೆ ಎಂದು ಡಾ. ಬಿ. ಎಂ. ಹೆಗ್ಡೆ ಹೇಳುತ್ತಾರೆ. ಮನುಷ್ಯ ತನ್ನ ಜೀವನವನ್ನು ಉನ್ನತಗೊಳಿಸಿಕೊಳ್ಳಬೇಕು, ಶರೀರವನ್ನು ಆರೋಗ್ಯವಾಗಿಟ್ಟುಕೊಳ್ಳಬೇಕು, ಚಿತ್ತಶುದ್ಧಿಯಿರಬೇಕು. ಇದು ಅನಿವಾರ್ಯ. ಪಂಚಮಹಾಯಜ್ಞಗಳನ್ನು ಮನುಷ್ಯ ಪಾಲಿಸದಿದ್ದರೆ ಆತ ಬದುಕಿದ್ದೂ ನಾಶವಾಗಿರುತ್ತಾನೆ. ಪಂಚಮಹಾಯಜ್ಞದ ಅರಿವನ್ನು ತಂದುಕೊಂಡು ಅದರ ಅಂಗವಾಗಿ ಸಮಾಜಹಿತದ ಕೆಲಸವನ್ನು ಮಾಡುವುದು ನಮ್ಮ ಕರ್ತವ್ಯ. ಈ ರೀತಿಯ ಜೀವನಕ್ರಮವನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪೂರಕವಾದ ಶಿಕ್ಷಣಕ್ರಮ ಜಾರಿಗೆ ಬರಬೇಕು.

ವ್ಯಕ್ತಿ ವಿಶೇಷ ಮಾಲಿಕೆ

# ಕಾಡಿನ ಹೃದಯ – ಕೆ. ಎಂ. ಚಿಣ್ಣಪ್ಪ

- ಕೆ.ಜನಾರ್ದನ ತುಂಗ



"೧೯೭೫ರಲ್ಲಿ ನನ್ನನ್ನು ಅಂತರಸಂತೆಗೆ ಇನ್-ಛಾರ್ಜ್ ರೇಂಜರ್ ಆಗಿ ವರ್ಗಾಯಿಸಿದಾಗ ಕಾಡಿನಲ್ಲೇ ನಾನೂ ಹೋಗಿ ವಾಸಿಸಿದರೆ ಮಾತ್ರ ಸಿಬ್ಬಂದಿಯನ್ನು ಅಲ್ಲಿ ಹಿಡಿದಿಟ್ಟುಕೊಳ್ಳಲು ಸಾಧ್ಯ ಎಂದು ಭಾವಿಸಿದೆ. ಎ. ಸಿ. ಎಫ್ ಆಗಿದ್ದ ನೇಗಿನಹಾಳರು ಹತ್ತು ಸಾವಿರ ರೂಪಾಯಿಗಳನ್ನು ನಮ್ಮ ವಸತಿಗಳ ನಿರ್ಮಾಣಕ್ಕೆ ಸ್ಯಾಂಕ್ಷನ್ ಮಾಡಿದರು. ಮುರಿದುಬಿದ್ದ, ಒಣಗಿದ ಮರದ ತುಂಡುಗಳನ್ನು ಹೇಗೋ ಹೊಂದಿಸಿಕೊಂಡು ಮಣ್ಣುಗೋಡೆ-ಹೆಂಚುಹೊದಿಕೆಗಳ ಐದು ಮನೆಗಳನ್ನು ಕೇವಲ ಒಂಭತ್ತೂವರೆ ಸಾವಿರ ರೂಪಾಯಿಗಳಲ್ಲಿ ನಿರ್ಮಿಸಿಕೊಂಡು ಸುಂಕದ ಕಟ್ಟೆಯ ಕಾಡಿನ ನಡುವೆ ವಾಸ ಮಾಡತೊಡಗಿದೆ"

ಕೋಟ್ರಂಗಡ ಮೇದಪ್ಪ ಚಿಣ್ಣಪ್ಪನವರು ತಮ್ಮ ಬದುಕಿನ ಕತೆಯನ್ನು ನಿರೂಪಿಸುವಾಗ ಹೇಳಿದ ಈ ಮಾತುಗಳು ಅವರ ಪರಿಸರ ಪ್ರೇಮದ ಪರಾಕಾಷ್ಠೆಯನ್ನೂ ಕರ್ತವ್ಯ ನಿಷ್ಠೆಯನ್ನೂ ಏಕಕಾಲಕ್ಕೆ ಪ್ರದರ್ಶಿಸುತ್ತವೆ. ಕೊಡಗಿನ ಕಾಡಿನ ಊರು, ಕುಮಟೂರಿನಲ್ಲಿ ನೀಲವ್ವ ಮತ್ತು ಮೇದಪ್ಪನವರ ಮಗನಾಗಿ ೧೯೪೧ರಲ್ಲಿ ಜನಿಸಿ ಬಾಲ್ಯವನ್ನು ಕಳೆದ ಚಿಣ್ಣಪ್ಪ ತಮ್ಮ ಸಮಕಾಲೀನರಂತೆ ನಗರಕ್ಕೆ ವಲಸೆ ಹೋಗುವ ಬದಲು ಕಾಡುಗಳ ಪರಿಸರವನ್ನು ಸಂರಕ್ಷಿಸುವ ಸಲುವಾಗಿ ಕಾಡಿನಲ್ಲೇ ನೆಲೆಸಿದರು. ಅವರು ಕುಮಟೂರು, ಕಾಕೂರು ಮತ್ತು ಶ್ರೀಮಂಗಲಗಳಲ್ಲಿ ವಿದ್ಯಾಭ್ಯಾಸ ಮಾಡಿದರು ಎಂಬುದು ಕೇವಲ ದಾಖಲೆಗಾಗಿ ಮಾತ್ರ. ಆದರೆ ಅವರು ಕಲಿತದ್ದು ಏನಿದ್ದರೂ ಪರಿಸರದ ಪಾಠಶಾಲೆಯಿಂದ.

ಜೀವನ ನಿರ್ವಹಣೆಗಾಗಿ ಮಲೇರಿಯಾ ನಿರ್ಮೂಲನಾ ಮಂಡಳಿ ಮತ್ತು ಮಣ್ಣು ಸಂರಕ್ಷಣಾ ಇಲಾಖೆಯಲ್ಲಿ ಆರಂಭಿಕ ವೃತ್ತಿಜೀವನ ನಡೆಸಿ ೧೯೬೭ರಲ್ಲಿ ಕಾರ್ಮಾಡು ಎಂಬ ಕುಗ್ರಾಮದಲ್ಲಿ ಫಾರೆಸ್ಟರ್ ಆಗಿ ಅರಣ್ಯ ಇಲಾಖೆಗೆ ಸೇರಿದ ಚಿಣ್ಣಪ್ಪ ೧೯೭೦ರಲ್ಲಿ ನಾಗರಹೊಳೆ ವನ್ಯಜೀವಿ ವಿಭಾಗವನ್ನು ಸೇರಿದರು. ಆಗ ಅಲ್ಲಿ ರೇಂಜರ್ ಆಗಿದ್ದ ಅಚ್ಚಯ್ಯನವರು, "ಫಾರೆಸ್ಟರ್ ಆಗಿ ಸೇರಿಕೊಂಡಿರುವ ಚಿಣ್ಣಪ್ಪ ಎಂಬ ಯುವಕ ಮುಂದೇನಾದರೂ ರೇಂಜರ್ ಆಗಿ ಬಂದರೆ ಈ ಕಾಡೂ, ಕಾಡುಪ್ರಾಣಿಗಳೂ ಉಳಿದಾವು" ಎಂದು ಹೇಳಿದ್ದು ನಿಜವಾಯಿತು. ೧೯೮೦ರಲ್ಲಿ ನಾಗರಹೊಳೆಗೆ ರೇಂಜರ್ ಆಗಿ ಮರಳಿದ ಚಿಣ್ಣಪ್ಪನವರು "ಇಲ್ಲಿನ ಇಲಾಖೆಯ ಕಾರ್ಯನಿರ್ವಹಣೆಗೆ ಅತ್ಯಂತ ಸುಭದ್ರವಾದ ತಳಪಾಯವನ್ನು ಹಾಕಿಕೊಟ್ಟಿದ್ದಾರೆ....... ಯಾವುದೇ ಸಂಪರ್ಕ ಸಾರಿಗೆಗಳಿಲ್ಲದ ಕಾಲದಿಂದಲೂ ಅರಣ್ಯನಿರ್ವಹಣೆಗಾಗಿ ತಮ್ಮೆಲ್ಲವನ್ನೂ ಮುಡಿಪಾಗಿಟ್ಟ ಚಿಣ್ಣಪ್ಪನವರು ನನಗೂ ನನ್ನಂಥವರಿಗೂ ದಾರಿದೀಪವಾಗಿದ್ದಾರೆ" ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಎ.ಟಿ. ಪೂವಯ್ಯನವರು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಾರೆ.

ಬಾಲ್ಯದಲ್ಲಿ ತಮ್ಮ ಅಣ್ಣ ಕುಟ್ಟಯ್ಯನವರು ಹೇಳುತ್ತಿದ್ದ ಸಾಹಸಭರಿತ ಕಾಡಿನ ಕಥೆಗಳನ್ನೂ ಬೇಟೆಯ ವಿವರಗಳನ್ನೂ ಕೇಳಿಸಿಕೊಂಡು ಸಮೀಪದ ಕಾಡುಗಳನ್ನು ಸುತ್ತಿ ಸರ್ವೆ ಮಾಡಿ ಪ್ರಾಣಿಪಕ್ಷಿಗಳ ಜೀವನಕ್ರಮದಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡ ಚಿಣ್ಣಪ್ಪನವರು ಕಾಡಿನ ಬಗ್ಗೆ ಶ್ರದ್ಧೆ ಗೌರವಗಳನ್ನು ಬೆಳೆಸಿಕೊಂಡರು; ಕೂಡುಬೇಟೆ, ಕಾಡುಪ್ರಾಣಿಗಳ ಮಾಂಸಭೋಜನ ಮೊದಲಾದವುಗಳ ಮೇಲಿನ ಆಸಕ್ತಿಯನ್ನೂ ಕಳೆದುಕೊಂಡರು. ತಮ್ಮ ಜೀವನವನ್ನೇ ಕಾಡಿನ ಸಮಗ್ರ ಪರಿಸರದ ಸಂರಕ್ಷಣೆಗಾಗಿ ಮೀಸಲಿರಿಸಿದರು.

ಕಾಡಿನ ಸಂರಕ್ಷಣೆ ಎಂದರೆ ಕೇವಲ ವನ್ಯಜೀವಿಗಳ ಸಂರಕ್ಷಣೆ ಮಾತ್ರವಲ್ಲ. ಕಾಡಿನ ಮರಗಳ ನಾಶ, ಅವೈಜ್ಞಾನಿಕ ಪದ್ಧತಿಯಿಂದ ಕಾಡು ಬೆಳೆಸುವಿಕೆ, ವನ್ಯಪ್ರಾಣಿಗಳ ಬೇಟೆ, ಕಾಡಿನ ಬೆಂಕಿ, ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಅಪಸವ್ಯಗಳು, ಅರಣ್ಯ ಒತ್ತುವರಿ, ಅರಣ್ಯ ಉತ್ಪನ್ನಗಳ ಸಂಗ್ರಹ, ಅರಣ್ಯಗಳ ಮೂಲಕ ನಡೆಯುವ ಕಳ್ಳಸಾಗಣೆ, ಪ್ರವಾಸಿಗರ ಕಾಟ, ಪ್ರಭಾವಿಗಳ ಕಾಟ ಇವೆಲ್ಲವನ್ನೂ ಎದುರಿಸುವುದು ಅರಣ್ಯ ಸಂರಕ್ಷಣಾಧಿಕಾರಿಯ ಜೀವನದ ದಿನನಿತ್ಯದ ಜಂಜಾಟಗಳು. ಚಿಣ್ಣಪ್ಪನವರು ಈ ಎಲ್ಲ ಸಮಸ್ಯೆಗಳನ್ನು ಹೇಗೆ ಎದುರಿಸಿದರು ಎಂಬ ರೋಚಕ ವಿಷಯಗಳನ್ನು ಶ್ರೀ ಟಿ ಎಸ್ ಗೋಪಾಲ್ ನಿರೂಪಣೆ ಮಾಡಿದ "ಕಾಡಿನೊಳಗೊಂದು ಜೀವ (ಪ್ರಕಾಶಕರು: ಭಾರತೀ ಪ್ರಕಾಶನ, ಮೈಸೂರು)" ಎಂಬ ಅವರ ಆತ್ಮಕತೆಯಲ್ಲಿ ಓದಿಕೊಳ್ಳಬಹುದು.

ವನ್ಯಜೀವಿಗಳ ಸಂರಕ್ಷಣೆಯಲ್ಲಿ ಅವುಗಳಿಗೆ ನಿರಾತಂಕವಲಯಗಳನ್ನು ಸೃಷ್ಟಿಸುವುದೂ, ಆಹಾರ, ನೀರು ಮುಂತಾದ ವ್ಯವಸ್ಥೆಗಳನ್ನು ಸ್ವಾಭಾವಿಕನೆಲೆಯಲ್ಲಿ ಕಲ್ಪಿಸುವುದೂ ಮುಖ್ಯ. ಹೀಗಾಗಿ, ಚಿಣ್ಣಪ್ಪನವರು ಕೆರೆಗಳ ನಿರ್ಮಾಣದಿಂದ ಉಪ್ಪುಗುಂಡಿಗಳ ನಿರ್ವಹಣೆಯವರೆಗೆ ಅನೇಕ ಕಾರ್ಯಗಳನ್ನು ಕೈಗೊಂಡರು. ಅಕ್ರಮಬೇಟೆ, ಜನರ ಸ್ವೇಚ್ಛೆಯ ಚಲನವಲನಗಳ ಜೊತೆಗೆ ಅರಣ್ಯಗಳಲ್ಲಿ ನಡೆಯುವ ಕಾನೂನುಬಾಹಿರ ಚಟುವಟಿಕೆಗಳನ್ನು ಅವರು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಿದರು.

ನಾಗರಹೊಳೆ ಅಭಯಾರಣ್ಯದ ಮೂಲಕ ಅಂತಾರಾಜ್ಯ ಸಂಚಾರಮಾರ್ಗ ಹಾದುಹೋಗುತ್ತದೆ. ಇದರಿಂದಾಗಿ ಪ್ರಾಣಿಗಳ ನೆಮ್ಮದಿಯ ಜೀವನಕ್ಕೆ ಭಂಗಬರುತ್ತಿತ್ತು. ರಾತ್ರಿಹೊತ್ತು ವಾಹನ ಸಂಚಾರಕ್ಕೆ ಎಡೆಗೊಡುವುದರಿಂದ ವನ್ಯಜೀವಿಗಳಿಗೆ ಒದಗುವ ವಿಪತ್ತನ್ನು ವಿವರವಾಗಿ ತಿಳಿಸಿಕೊಡುವ ಸುದೀರ್ಘ ವರದಿಯನ್ನು ತಯಾರಿಸಿದ ಚಿಣ್ಣಪ್ಪ ನಾಗರಹೊಳೆಯ ಮೂಲಕ ವಾಹನ ಸಂಚಾರವನ್ನು ಬಂದ್ ಮಾಡಿಸಿದರು. ಇವೆಲ್ಲಕ್ಕಿಂತ ಹೆಚ್ಚಾಗಿ, ನಾಗರಹೊಳೆಗೆ ಪ್ರವಾಸಕ್ಕೆ ಬರುವ ಶಾಲಾಮಕ್ಕಳಿಗೆ ತಾವೇ ಪರಿಸರದ ಪಾಠ ಮಾಡಿ ಮುಂದಿನ ಜನಾಂಗದಲ್ಲಿ ಪರಿಸರಪ್ರೀತಿಯನ್ನು ಬೆಳೆಸಿದರು. ನಾಗರಹೊಳೆ ಅರಣ್ಯಪ್ರದೇಶದಲ್ಲಿ ವಾಸವಾಗಿದ್ದ ಬುಡಕಟ್ಟು ಜನಾಂಗದ ಪುನರ್ವಸತಿಗಾಗಿಯೂ ಚಿಣ್ಣಪ್ಪನವರು ಆಸಕ್ತಿವಹಿಸಿದರು.

ಇಲಾಖೆಯವರು ಮಾಡುತ್ತಿದ್ದ ಪ್ರಾಣಿಗಣತಿ ಅವೈಜ್ಞಾನಿಕ ಎಂದು ಚಿಣ್ಣಪ್ಪನವರು ಬಹಿರಂಗವಾಗಿಯೇ ಹೇಳುತ್ತಿದ್ದರು. ಕಾಡುಗಳ ಬಗ್ಗೆ ನಡೆಯುವ ವೈಜ್ಞಾನಿಕ ಸಂಶೋಧನೆಗಳಿಗೂ ಅರಣ್ಯಇಲಾಖೆಯ ಕಾರ್ಯನಿರ್ವಹಣೆಗೂ ಸಮನ್ವಯವಿಲ್ಲದ ಕಾರಣ ಸಂಶೋಧನೆಗಳು ನಿರರ್ಥಕವಾಗುತ್ತಿದ್ದವು. ಇನ್ನೊಂದೆಡೆ ಅರಣ್ಯನಾಶ ನಿರಂತರವಾಗಿ ನಡೆಯುತ್ತಲೇ ಇತ್ತು. ಆದರೆ ಚಿಣ್ಣಪ್ಪನವರು ಸಂಶೋಧಕರಿಗೆ ಬೆಂಬಲ ನೀಡಿದ್ದಲ್ಲದೆ ತಮ್ಮ ಪ್ರಾಯೋಗಿಕ ಜ್ಞಾನವನ್ನೂ ಧಾರೆಯೆರೆದರು. ಹೀಗಾಗಿ ಉಲ್ಲಾಸ ಕಾರಂತರಂಥವರಿಗೆ ನಿರಾತಂಕವಾಗಿ ತಮ್ಮ ಸಂಶೋಧನೆಗಳನ್ನು ನಡೆಸುವುದು ಸಾಧ್ಯವಾಯಿತು. ಕಾರಂತರ ಸಂಶೋಧನೆಗಳಿಗೆ ಪಟ್ಟಭದ್ರರಿಂದ ಯಾವ ಮಟ್ಟದ ವಿರೋಧ ವ್ಯಕ್ತವಾಯಿತೆಂದರೆ ಅದು ಕಾಡಿಗೆ ಬೆಂಕಿ ಹಚ್ಚುವವರೆಗೂ ಹೋಯಿತು.

ಪುಟ 8 ರಲ್ಲಿ ಮುಂದುವರಿದಿದೆ

## ಶ್ರದ್ಧಾಂಜಲಿ

**ಕಳೆದ ಶತಮಾನದಲ್ಲಿ ಭಾರತವು ಕಂಡ ಅತ್ಯಂತ ನಿಷ್ಠಾವಂತ ನಿಸರ್ಗವಾದಿಗಳಲ್ಲಿ ಕೆ. ಎಂ. ಚಿಣ್ಣಪ್ಪನವರು ಒಬ್ಬರು. ನಾಗರಹೊಳೆ ಅಭಯಾರಣ್ಯವು ಮಾದರಿ ವನ್ಯಜೀವಿ ತಾಣವಾಗಿ ಪ್ರಪಂಚದಾದ್ಯಂತ ಪ್ರಸಿದ್ಧಿ ಗಳಿಸುವಲ್ಲಿ ಚಿಣ್ಣಪ್ಪನವರ ಕೊಡುಗೆ ಅಸಾಮಾನ್ಯ. ಅರಣ್ಯಪರವಾದ ಅವರ ನಿಲುವುಗಳನ್ನು ತುಂಬುಮನಸ್ಸಿನಿಂದ ಪ್ರಶಂಸಿಸಿ, ಪ್ರೋತ್ಸಾಹಿಸುತ್ತಿದ್ದ ತೇಜಸ್ವಿನಿ - ಅನಂತಕುಮಾರ್ ದಂಪತಿಗಳು ಚಿಣ್ಣಪ್ಪನವರ ಅಭಿಮಾನಿಗಳೂ ಆಗಿದ್ದರು. ಇತ್ತೀಚೆಗೆ ನಿಧನರಾದ ಚಿಣ್ಣಪ್ಪನವರಿಗೆ ಅದಮ್ಯಚೇತನ ಮತ್ತು ಅನಂತಕುಮಾರ್ ಪ್ರತಿಷ್ಠಾನಗಳ ಪರವಾಗಿ ಹೃತ್ಪೂರ್ವಕ ಶ್ರದ್ಧಾಂಜಲಿಗಳನ್ನು ಸಮರ್ಪಿಸುತ್ತೇವೆ.**

ಪುಟ 7 ರಿಂದ ತಾನು ಪ್ರೀತಿಯಿಂದ ಸಾಕಿದ್ದ ಕಡವೆಯನ್ನು ಗುಂಡಿಕ್ಕಿ ಕೊಂದ ಶಂಭುವಿನ ಮೇಲೆ ಗುಂಡುಹಾರಿಸಿದ ಚಂಗಪ್ಪ ಎಂಬ ಫಾರೆಸ್ಟ್ ಗಾರ್ಡ್ ಮಾಡಿದ ಅಪರಾಧದಲ್ಲಿ ಚಿಣ್ಣಪ್ಪನವರನ್ನೂ ಸಿಕ್ಕಿಸಲಾಗಿತ್ತು. ಅವರನ್ನು ಜೈಲಿಗೂ ತಳ್ಳಿದರು. ೧೯೯೨ರಲ್ಲಿ ಚಿಪ್ಪನ ಕೊಲೆ ಸಂದರ್ಭದಲ್ಲಿ ತಮ್ಮ ಮೇಲೆ ಬಂದ ಆಪಾದನೆ ಮತ್ತು ಅರಣ್ಯಕ್ಕೆ ಬೆಂಕಿ ಹಾಕಿದ ಪ್ರಕರಣದಿಂದ ನೊಂದ ಚಿಣ್ಣಪ್ಪನವರು ೧೯೯೩ರಲ್ಲಿ ಸೇವೆಯಿಂದ ಸ್ವಯಂನಿವೃತ್ತಿ ಪಡೆದರು. ಆ ಹೊತ್ತಿಗೆ ಅವರು ಅರಣ್ಯಇಲಾಖೆಯಲ್ಲಿ ೨೬ ವರ್ಷಗಳ ಸೇವೆ ಸಲ್ಲಿಸಿದ್ದರು ಈ ಮಧ್ಯೆ ರಿಸರ್ಚ್ ರೇಂಜರ್ ಆಗಿ ಪದೋನ್ನತಿ ನೀಡುವ ಪ್ರಸ್ತಾಪವನ್ನು ಕಾಡಿನಿಂದ ದೂರವಾಗಲು ಇಷ್ಟಪಡುವುದಿಲ್ಲ ಎಂಬ ಕಾರಣ ನೀಡಿ ನಿರಾಕರಿಸಿದ್ದರು.

ನಿವೃತ್ತಿಯ ನಂತರ ವೈಲ್ಡ್‌ಲೈಫ್ ಫಸ್ಟ್ ಸಂಘಟನೆಯ ಅಧ್ಯಕ್ಷರಾಗಿ ತಮ್ಮ ಪರಿಸರ ಸೇವೆಯನ್ನು ಎಲ್ಲ ಕಾಡುಗಳಿಗೂ ವಿಸ್ತರಿಸಿದರು. ಕಳಪೆ ದರ್ಜೆಯ ಅದಿರಿನ ಆಸೆಗಾಗಿ, ಬಹುನದಿಗಳ ಮೂಲವಾಗಿದ್ದ ಕುದುರೆಮುಖದ ಶೋಲಾ ಅರಣ್ಯಗಳ ನಾಶಕ್ಕೆ ಕಾರಣವಾಗಿದ್ದ ಮಾನವ ಚಟುವಟಿಕೆಗಳನ್ನು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೂಲಕ ಕೊನೆಗೊಳಿಸಲು ಸಾಧ್ಯವಾಗಿದ್ದು ಚಿಣ್ಣಪ್ಪನವರ ವೈಲ್ಡ್‌ಲೈಫ್ ಫಸ್ಟ್ ಬಳಗದ ಸಾಧನೆ.

ರಾಜ್ಯಸರಕಾರವು ಚಿಣ್ಣಪ್ಪನವರ ಉತ್ತಮ ಕಾರ್ಯಸಾಧನೆಗಾಗಿ ಮುಖ್ಯಮಂತ್ರಿಗಳ ಚಿನ್ನದ ಪದಕವನ್ನು ೧೯೮೫ರಲ್ಲಿ ಪ್ರದಾನ ಮಾಡಿತು. ಬಾಗ್ ಸೇವಕ್ (೧೯೯೬), ನ್ಯೂಯಾರ್ಕ್ ಜುಆಲಾಜಿಕಲ್ ಸೊಸೈಟಿಯ ಪ್ರಶಸ್ತಿಪತ್ರ (೧೯೯೮) ಎಸ್ಸೋ ಹುಲಿ ಪ್ರಶಸ್ತಿ (೨000) ಸ್ಯಾಂಕ್ಚುಯರಿ ಮ್ಯಾಗಝೀನ್ ಎಬಿಎನ್-ಆಮ್ರೋ ಪ್ರಶಸ್ತಿ (೨00೪) – ಅವರಿಗೆ ಸಂದ ಇತರ ಕೆಲವು ಪ್ರಶಸ್ತಿಗಳು. ಚಿಣ್ಣಪ್ಪನವರ ಮೇಲೆ ಪ್ರಾಣಿಗಳು ತೋರಿಸುತ್ತಿದ್ದ ನಿರ್ವ್ಯಾಜ ಪ್ರೀತಿಯೇ ಅವರಿಗೆ ದೊರೆತ ಅತ್ಯುನ್ನತ ಪ್ರಶಸ್ತಿ. ಅವರಿಗೆ ಬೆನ್ನೆಲುಬಾಗಿ ನಿಂತ ಪತ್ರಕರ್ತರ, ಪರಿಸರ ಪ್ರೇಮಿಗಳ ದೊಡ್ಡ ತಂಡವೇ ಅವರು ಗಳಿಸಿದ ಆಸ್ತಿ. ಕಾಡಿನಲ್ಲಿ ಸಿಂಹವಿದ್ದರೆ ಕಾಡು ಸುರಕ್ಷಿತವಾಗುತ್ತದಂತೆ. ಚಿಣ್ಣಪ್ಪನವರು ಕಾಡುಗಳಲ್ಲಿ ಇದ್ದಷ್ಟು ದಿನ ಕಾಡೂ ಬೆಳೆಯಿತು, ಕಾಡುಪ್ರಾಣಿಗಳೂ ಸುರಕ್ಷಿತವಾಗಿದ್ದವು.

"ಸಮಾಜಕ್ಕೆ ಒಳಿತು ಮಾಡುವವರು ಕಳ್ಳಕಾಕರಿಗೆ ಪ್ರಿಯವಾಗಲಾರರು – ಎಂಬ ವಿಷಯವನ್ನು ಚಿಣ್ಣಪ್ಪನವರನ್ನು ನೆನೆದರೆ ತಿಳಿದೀತು! ಅವರ ಮೇಲಿನ ಸೇಡನ್ನು ತೀರಿಸಲು ಅವರ ಸ್ವಂತ ಮನೆಯನ್ನು ಸಹ ಸುಟ್ಟು ಕಾಡಿದರು" ಎಂದು ಶಿವರಾಮ ಕಾರಂತರೇ ತಮ್ಮ "ಅಳಿದುಳಿದ ನೆನಪುಗಳು" ಪುಸ್ತಕದಲ್ಲಿ ದಾಖಲಿಸುವಂಥ ಎತ್ತರಕ್ಕೆ ಬೆಳೆದ ಚಿಣ್ಣಪ್ಪನವರು ೨೬/0೨/೨0೨೪ರಂದು ಇಹಲೋಕ ತ್ಯಜಿಸಿದರು.




**ಚಿಣ್ಣಪ್ಪನವರ ಅನುಭವಕಥನ 'ಕಾಡಿನೊಳಗೊಂದು ಜೀವ' ಪುಸ್ತಕದ ಬಿಡುಗಡೆಯ ಸಂದರ್ಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ಲೇಖಕ ಶ್ರೀ ಟಿ.ಎಸ್. ಗೋಪಾಲ್ ಅವರೊಡನೆ (೨೦೨೦)**

## ನಿತ್ಯ ಅನ್ನದಾನ- ತಿಂಗಳ ಅಂಕಿಅಂಶ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ಫೆಬ್ರವರಿಯಲ್ಲಿ ವಿತರಿಸಲಾದ ಊಟದ ಅಂದಾಜು ಸಂಖ್ಯೆ | ಈವರೆಗೂ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ 2.00 ರಿಂದ 3.00 | 4350 | 1,88,400 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ ಜೈನ್ ಟೆಂಪಲ್ ಮುಂಭಾಗ 12.30 ರಿಂದ 1.30 | 2,900 | 1,23,600 |
| 3 | ನಗರ್ತಪೇಟೆ ಮುಖ್ಯರಸ್ತೆಯ ನಗರೇಶ್ವರ ದೇವಸ್ಥಾನ 12.30 ರಿಂದ 1.30 | 2,900 | 1,04,800 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು ಕೆರೆ ಪಕ್ಕ ಬೆಂಗಳೂರು 12.30 ರಿಂದ 1.30 | 4350 | 68,850 |
| 5 | ಅನಂತಸ್ಮೃತಿ ವನ, ಲಾಲ್ ಬಾಗ್ ಪಶ್ಚಿಮ ದ್ವಾರ ಎದುರು (ಮ.12:30ರಿಂದ 1:30ರವರೆಗೆ) | 4350 | 24,620 |
| | ಒಟ್ಟು ಅಂದಾಜು | **18,850** | **5,29,470** |

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಸಂಖ್ಯೆ | ಸ್ಥಳ | ಭಾಗವಹಿಸಿದವರು | ಚಟುವಟಿಕೆ |
|---|---|---|---|
| **425** 18/02/24 | ಬೆಂಗಳೂರು ವಿಶ್ವವಿದ್ಯಾಲಯದ ಬಯೋ ಪಾರ್ಕ್ | ಬಿಎಂಎಸ್ ಕಾಲೇಜಿನ ವಿದ್ಯಾರ್ಥಿಗಳು, ಹಸಿರು ಯೋಧರು, ಸಂಸ್ಥೆಯ ಸಿಬ್ಬಂದಿ | 05 ಗಿಡಗಳನ್ನು ನೆಡಲಾಯಿತು |
| **426** 25/02/24 | ಬೆಂಗಳೂರು ವಿಶ್ವವಿದ್ಯಾಲಯದ ಬಯೋ ಪಾರ್ಕ್ | ಬಿಎಂಎಸ್ ಕಾಲೇಜಿನ ವಿದ್ಯಾರ್ಥಿಗಳು, ಹಸಿರು ಯೋಧರು, ಸಂಸ್ಥೆಯ ಸಿಬ್ಬಂದಿ | 10 ಗಿಡಗಳನ್ನು ನೆಡಲಾಯಿತು |
| **427** 03/03/24 | ಬೆಂಗಳೂರು ವಿಶ್ವವಿದ್ಯಾಲಯದ ಬಯೋಪಾರ್ಕ್ | ಕಲ್ಪ ರಕ್ಷ ಎಜುಕೇಷನ್ ಟ್ರಸ್ಟ್ ಕಾರ್ಯಕರ್ತರು, ಅದಮ್ಯ ಚೇತನ ಸಿಬ್ಬಂದಿ, ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು | 10 ಗಿಡಗಳನ್ನು ನೆಡಲಾಯಿತು |
| **428** 10/03/24 | ಬೆಂಗಳೂರು ವಿಶ್ವವಿದ್ಯಾಲಯದ ಬಯೋ ಪಾರ್ಕ್ | ಅದಮ್ಯ ಚೇತನ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು, ಅದಮ್ಯ ಚೇತನ ಸಿಬ್ಬಂದಿ - 90 ಪರಿಸರ ಸ್ನೇಹಿಗಳು | 05 ಗಿಡಗಳನ್ನು ನೆಡಲಾಯಿತು |

# ಡಕಾಯಿತರ ನಾಡಿನಲ್ಲಿ ದೇವಾಲಯ ಉತ್ಖನನ



**ಕೆ.ಕೆ. ಮೊಹಮ್ಮದ್**
ಭಾರತೀಯ ಪುರಾತತ್ವ ಇಲಾಖೆಯ ನಿವೃತ್ತ ಅಧಿಕಾರಿ

ಪುರಾತತ್ವಶಾಸ್ತ್ರಜ್ಞರಿಗೆ ಎರಡು ಪ್ರಮುಖ ಕರ್ತವ್ಯಗಳಿರುತ್ತವೆ - ಶೋಧ ಮತ್ತು ಉತ್ಖನನ. ಇತ್ತೀಚೆಗೆ ನಾವು ಅಯೋಧ್ಯೆಯಲ್ಲಿ ಉತ್ಖನನ ಮಾಡಿ ಕೆಲವು ತಾರ್ಕಿಕ ತೀರ್ಮಾನಗಳಿಗೆ ಬರಲು ಸಾಧ್ಯವಾಯಿತು. ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ನಡೆದ ಈ ಉತ್ಖನನ ಕಾರ್ಯದಿಂದ ಅಯೋಧ್ಯೆಯ ದೀರ್ಘಕಾಲೀನ ವಿವಾದ ಬಗೆಹರಿದಿದೆ. ತುಂಬಾ ಶಿಥಿಲಸ್ಥಿತಿಯಲ್ಲಿರುವ ಅಥವಾ ಬಿದ್ದು ಹೋಗಿರುವ ಸ್ಮಾರಕಗಳ ಪಾಲನೆ ಹಾಗೂ ಸಂರಕ್ಷಣೆ ನಮ್ಮ ಎರಡನೇ ಕರ್ತವ್ಯ. ಬಟೇಶ್ವರ ದೇವಾಲಯ ಸಂಕೀರ್ಣದ ಪುನರ್ನಿರ್ಮಾಣ ಇದಕ್ಕೊಂದು ಉತ್ತಮ ಉದಾಹರಣೆ.

ಚಂಬಲ್ ಕಣಿವೆಯ ಬಟೇಶ್ವರ್ ಎಂಬ ಪ್ರದೇಶದಲ್ಲಿ ಸಂಪೂರ್ಣ ಶಿಥಿಲಾವಸ್ಥೆಯಲ್ಲಿದ್ದ ೨೦೦ಕ್ಕೂ ಹೆಚ್ಚು ದೇವಾಲಯಗಳಿದ್ದವು. ಬಟೇಶ್ವರವು ಕಾನನದ ನಡುವೆ ಇರುವ, ಡಕಾಯಿತರಿಂದ ಪೀಡಿತವಾಗಿರುವ ಪ್ರದೇಶ. ಅಲ್ಲಿ ಕ್ಷೇತ್ರಕಾರ್ಯ ನಡೆಸುವವರಿಗೆ ಕನಿಷ್ಠ ಮೂಲಸೌಕರ್ಯಗಳೂ ಇರಲಿಲ್ಲ. ಹೀಗಾಗಿ ಅಲ್ಲಿ ಕೆಲಸ ಮಾಡುವ ಜನರ ಮನಸ್ಥಿತಿಯಲ್ಲಿ ಪರಿವರ್ತನೆ ತರುವುದು ನಮ್ಮ ಮೊದಲ ಸವಾಲಾಗಿತ್ತು. ಡಕಾಯಿತರ ನೆರವಿಲ್ಲದೆ ಯಾವ ಕೆಲಸವೂ ಸಾಧ್ಯವಿರಲಿಲ್ಲ. ಆದರೆ ಅವರನ್ನು ಸಂಪರ್ಕಿಸುವುದೇ ಇನ್ನೊಂದು ಪ್ರಮುಖ ಸವಾಲಾಗಿತ್ತು.



ಬಟೇಶ್ವರದಲ್ಲಿ ಒಂದು ದೇವಾಲಯವಿತ್ತು. ಬಟಾ ಈಶ್ವರ - ಶಿವಪುರಾಣದ ಪ್ರಕಾರ ಅದು ಶಿವನ ದೇವಾಲಯ, ವಿಷ್ಣುಪುರಾಣದ ಪ್ರಕಾರ ಅದು ವಿಷ್ಣು ದೇವಾಲಯ. ನಮ್ಮ ಪಾಲಿಗೆ ಅದೊಂದು ಪೂಜಾಸ್ಥಳ; ಶಿಥಿಲಾವಸ್ಥೆಯಲ್ಲಿರುವ ಸ್ಮಾರಕ. ಹೀಗಾಗಿ, ಈ ವಿಶಿಷ್ಟ ದೇವಾಲಯದ ಪುನರ್ನಿರ್ಮಾಣದ ಕೆಲಸವನ್ನು ಕೈಗೆತ್ತಿಕೊಂಡೆವು.

ಚಂಬಲ್ ಪ್ರದೇಶವು ಅಂತಹ ದಟ್ಟವಾದ ಕಾಡಲ್ಲ, ಅಲ್ಲಿ ಮರಳ ದಿಬ್ಬಗಳು, ಕಂದರಗಳ ನಡುವೆ ಸಾಗುವ ಕಾಲುದಾರಿಗಳನ್ನು ತಿಳಿದುಕೊಳ್ಳುವುದು ಕಷ್ಟ. ಅದಕ್ಕಿಂತ ಹೆಚ್ಚಾಗಿ ಪೋಲೀಸರೂ ಕಾಲಿಡಲು ಹೆದರುವ ಭಯಂಕರ ಡಕಾಯಿತರಿಂದ ಪೀಡಿತವಾಗಿರುವ ಪ್ರದೇಶವದು. ಅಂತಹ ಸ್ಥಳಕ್ಕೆ ನಾವು ಹೋದೆವು. ಅಲ್ಲೊಬ್ಬ ಮಾನ್‌ಸಿಂಗ್ ಎಂಬ ಡಕಾಯಿತನಿದ್ದ. ಆತನ ವಿರುದ್ಧ 1,112 ದರೋಡೆ ಪ್ರಕರಣಗಳು ದಾಖಲಾಗಿದ್ದವು. ಆತ 32 ಜನ ಪೊಲೀಸರೂ ಸೇರಿದಂತೆ 185 ಜನರನ್ನು ಕೊಂದಿದ್ದ. ಇನ್ನೊಬ್ಬಾತ, ಮೊಹರ್ ಸಿಂಗ್. ಈತನೂ 85 ಜನರನ್ನು ಕೊಂದಿದ್ದ. ಇವನ ವಿರುದ್ಧ 250 ಅಪಹರಣ ಪ್ರಕರಣಗಳು ದಾಖಲಾಗಿದ್ದವು. ಅದೇ ರೀತಿ, ಮಲ್ಖಾನ್ ಸಿಂಗ್, ಮಾನ್ ಸಿಂಗ್ ತೋಮರ್ ಮತ್ತು ಫೂಲನ್ ದೇವಿ ಮುಂತಾದ ಇತರ ಅನೇಕ ಡಕಾಯಿತರ ನೆಲೆ ಅದಾಗಿತ್ತು.

ಇಂತಹ ಡಕಾಯಿತರನ್ನು ಸಂಪರ್ಕಿಸಿ ಅವರ ನಡುವೆಯೇ ಕೆಲಸ ಮಾಡುವುದು ನಮಗೆ ದೊಡ್ಡ ಸವಾಲಾಗಿತ್ತು. ೧೯೭೨ರಲ್ಲಿ ಶರಣಾಗತನಾಗಿದ್ದ ಮೊಹರ್ ಸಿಂಗ್, ಬಟೇಶ್ವರ ದೇವಾಲಯದ ಕಾಮಗಾರಿಗಳನ್ನು ನೋಡಿಕೊಳ್ಳುವ ಆಸಕ್ತಿ ತೋರಿಸಿದ. ಆದರೂ ಈ ಕಾರ್ಯಕ್ಕಾಗಿ ಎಂತಹ ಸಂಕಟವನ್ನಾದರೂ ಎದುರಿಸುವ ಮನಸ್ಥಿತಿಯನ್ನು ನಾನೂ ನನ್ನ ತಂಡದವರೂ ರೂಢಿಸಿಕೊಳ್ಳಬೇಕಿತ್ತು. ಇದರ ಜೊತೆಗೆ ಪೋಲೀಸರನ್ನೂ ಡಕಾಯಿತರನ್ನೂ ಒಲಿಸಿಕೊಂಡು ಪುರಾತತ್ವ ಇಲಾಖೆಯ ತಂಡದೊಡನೆ ಕೆಲಸ ಮಾಡಬೇಕಾಗಿತ್ತು.

ಮಧ್ಯಪ್ರದೇಶದಲ್ಲಿ ವಿಜಯರಾಮನ್ ಎಂಬುವರು ಹಿರಿಯ ಪೊಲೀಸ್ ಅಧಿಕಾರಿಯಾಗಿದ್ದರು. ಅವರ ಪತ್ನಿ ಪ್ರವಾಸೋದ್ಯಮ ಇಲಾಖೆಯಲ್ಲಿದ್ದರು. ಪ್ರವಾಸೋದ್ಯಮ ಹಾಗೂ ಪುರಾತತ್ವ ಇಲಾಖೆಗಳು ಪರಸ್ಪರ ಪೂರಕವಾಗಿರುತ್ತವೆ. ಕರ್ತವ್ಯದಕ್ಷತೆಗೆ ಹೆಸರಾಗಿದ್ದ ವಿಜಯರಾಮನ್ ಅವರು ಗಾಜಿಬಾಬಾ ಎಂಬ ಡಕಾಯಿತನನ್ನು ಬೀದಿಯಲ್ಲೇ ಗುಂಡಿಟ್ಟು ಕೊಂದಿದ್ದರು. ಅವರನ್ನು ನಾನು ಸಂಪರ್ಕಿಸಿ ನಮ್ಮ ಕೆಲಸಗಳಿಗೆ ಅವರ ಸಹಕಾರವನ್ನು ಸಂಪಾದಿಸಿದೆ. ಪ್ರತಿಯೊಬ್ಬ ಮಾನವನ ದೇಹದ ಒಳಗೂ ಒಂದು ಪ್ರಬಲವಾದ ಚಾಲನಾಶಕ್ತಿ ಅಡಗಿರುತ್ತದೆ ಎಂಬುದು ನನ್ನ ನಂಬಿಕೆ. ಇದನ್ನು ಎಚ್ಚರಗೊಳಿಸಿದರೆ ಮಾನವರಿಂದ ಅಸಾಧ್ಯ ಎಂಬಂತಹ ಅನೇಕ ಕೆಲಸಗಳನ್ನೂ ಮಾಡುವುದು ಸಾಧ್ಯ. ೨೦೦೪ರಲ್ಲಿ ನನ್ನ ಕೆಲಸವನ್ನು ಪ್ರಾರಂಭಿಸಿದ ಮೊದಲವರ್ಷದಲ್ಲಿ ನಿರ್ಭಯ್ ಸಿಂಗ್ ಗುರ್ಜರ್ ಎಂಬ ಡಕಾಯಿತನ ಜೊತೆ ನನ್ನ ಸಂಪರ್ಕವಿರಿಸಿಕೊಂಡಿದ್ದೆ. ಜೊತೆಗೆ ಶರಣಾಗತರಾದ ಅನೇಕ ಡಕಾಯಿತರ ಜೊತೆಗೆ ಸಂಪರ್ಕ ಸಾಧಿಸಿದೆ. "ನಮ್ಮ ಕೆಲಸವೇನಿದ್ದರೂ ದೇವಾಲಯಗಳ ಪುನರ್ನಿರ್ಮಾಣ; ಮುಂದೆ ಇದೊಂದು ಪ್ರವಾಸೀ ತಾಣವಾಗಿ ಅಭಿವೃದ್ಧಿ ಹೊಂದುತ್ತದೆ, ಇದರಿಂದ ನಿಮ್ಮ ಮಕ್ಕಳಿಗೆ ಉದ್ಯೋಗ ಸಿಗುತ್ತದೆ" ಎಂದು ಅವರಿಗೆ ಮನವರಿಕೆ ಮಾಡಿದೆ.

ನನ್ನ ಹೆಸರು ಮೊಹಮ್ಮದ್ ಎಂದಿರುವುದರಿಂದ ಡಕಾಯಿತರು ನನ್ನ ಕಾರ್ಯಕ್ಕೆ ಸಹಕರಿಸಲಾರರು ಎಂಬ ಆತಂಕ ನನಗಿತ್ತು. ನಾನು ನನ್ನ ಕರ್ತವ್ಯದ ಬಗ್ಗೆ ಸರಕಾರೀ ಆದೇಶವನ್ನು ತೋರಿಸಿದೆ. ನಮ್ಮ ತಂಡದಲ್ಲಿ ಅನೇಕ ಯುವತಿಯರಿದ್ದರು. ಅವರಿಗೆ ಇಂತಹ ಸ್ಥಳದಲ್ಲಿ ಕೆಲಸ ಮಾಡಲು ಆತಂಕವಿತ್ತು. ಅದೃಷ್ಟವಶಾತ್, ಡಕಾಯಿತರೆಲ್ಲರೂ ನಾಲ್ಕು ತಿಂಗಳುಗಳ ಕಾಲ ತಮ್ಮ ನೆಲೆಯನ್ನು ಅಲ್ಲಿಂದ ಬೇರೆಡೆಗೆ ಬದಲಾಯಿಸಲು ಒಪ್ಪಿಕೊಂಡರು. ಅವರೆಲ್ಲರ ಅನುಮತಿಯೊಂದಿಗೆ ನಮ್ಮ ಕೆಲಸ ಪ್ರಾರಂಭಿಸಿದೆವು.

ಅಲ್ಲಿ ಒಂದಲ್ಲ, ಎರಡಲ್ಲ, ಇನ್ನೂರು ದೇವಾಲಯಗಳ ಕಲ್ಲುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಒಂದೇ ನಿರ್ಮಾಣಕ್ಕೆ ಸೇರಿದ ಯಾವ ಎರಡು ಕಲ್ಲುಗಳೂ ಜೊತೆಯಲ್ಲಿರಲಿಲ್ಲ. ಇಡೀ ಪ್ರದೇಶವು ಮುಳ್ಳುಕಂಟಿಗಳಿಂದ, ಮರಗಿಡಗಳಿಂದ ಮುಚ್ಚಿಹೋಗಿತ್ತು. ಅಲ್ಲಿ ಕಾಣಿಸಿದ ಮೆಟ್ಟಿಲುಗಳ ಆಧಾರದ ಮೇಲೆ ಅಲ್ಲಿ ಒಂದು ದೇವಾಲಯವಿರಬಹುದೆಂದು ಊಹಿಸಿದೆವು. ಅದೇ ರೀತಿ ಇನ್ನೆರಡು ದೇವಾಲಯಗಳ ಮೆಟ್ಟಿಲುಗಳನ್ನೂ ಗುರುತಿಸಿದೆವು. ಕೆಲಸವನ್ನು ಮುಂದುವರಿಸಲು ಆ ಪ್ರದೇಶವನ್ನು ಸ್ವಚ್ಛಗೊಳಿಸಲೇ ಬೇಕಿತ್ತು. ಹೀಗಾಗಿ, ಆ ಕೆಲಸವನ್ನು ಶರಣಾಗತರಾದ ಡಕಾಯಿತರಿಗೆ ಒಪ್ಪಿಸಿ ಅಲ್ಲಿಂದ ತೆರಳಿದೆವು.

ಒಂದು ತಿಂಗಳ ನಂತರ ಮರಳಿ ನಮ್ಮ ಕಾರ್ಯವನ್ನು ಮುಂದುವರಿಸಿದೆವು. ಅದು ಕಲ್ಲುಗಳೊಡನೆ ಮಾತನಾಡುವ ಕೆಲಸ! ನಂದಿ ಮುಂತಾದ ವಿಗ್ರಹಗಳು ಹೇಳುವ ಕಥೆಗಳನ್ನು ಗಮನವಿಟ್ಟು ಆಲಿಸಬೇಕು. ಕೇಳುವ ಕ್ಷಮತೆಯಿದ್ದರೆ ಕಲ್ಲುಗಳಿಂದಲೂ ಧ್ವನಿ ಕೇಳಿಸುತ್ತದೆ ಎಂಬ ಮಾತು ಹಿಂದಿಯಲ್ಲಿದೆ. ಕಲ್ಲುಗಳನ್ನು, ವಿಗ್ರಹಗಳನ್ನು ಗುರುತಿಸುವುದೆಂದರೆ ಅದರ ಸ್ಥಾನವನ್ನೂ, ಕಾಲವನ್ನೂ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಮೌಲ್ಯವನ್ನೂ ನಿರ್ಧರಿಸುವುದು. ನಾವು ಇಡೀ ಸ್ಥಳವನ್ನು ಸರ್ವೇಕ್ಷಣೆ ಮಾಡಿದೆವು. ಈ ಸಮಯಕ್ಕೆ ಡಕಾಯಿತರೂ ಅಲ್ಲಿನ ಕಲ್ಲುಗಳೊಡನೆ ಪರಿಚಿತರಾಗಿದ್ದರು. ಏಳು, ಎಂಟನೆಯ ಶತಮಾನಕ್ಕೆ ಸೇರಿದ್ದ ಉತ್ತರ ಭಾರತ ಶೈಲಿಯ ದೇವಾಲಯಗಳ ಪುನರ್ನಿರ್ಮಾಣ ನಮ್ಮೆದುರಿದ್ದ ಸವಾಲಾಗಿತ್ತು.

ಡಕಾಯಿತರಿಂದ ನಮಗೆ ಒದಗಬಹುದಾಗಿದ್ದ ಸಮಸ್ಯೆಯನ್ನೇನೋ ಬಗೆಹರಿಸಿಕೊಳ್ಳುವುದು ನಮಗೆ ಸಾಧ್ಯವಾಯಿತು. ಆದರೆ ಅದಕ್ಕಿಂತ ಕ್ಲಿಷ್ಟವಾದ ಸಮಸ್ಯೆಗಳನ್ನು ಜನಪ್ರತಿನಿಧಿಗಳು ಮತ್ತು ಅಧಿಕಾರಸ್ಥರು ಒಡ್ಡಿದರು. ಅಧಿಕಾರಸ್ಥರಿಂದ ಒದಗಿದ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲು ಸರಸಂಘಚಾಲಕ ಸುದರ್ಶನ್ ನೀಡಿದ ನೆರವನ್ನು ನಾವು ಮರೆಯುವಂತಿಲ್ಲ.

ಉತ್ಖನನ ಕಾರ್ಯದಲ್ಲಿ ನಮಗೆ ಯಥೇಚ್ಛವಾದ ನೀರಿನ ಮೂಲ ದೊರಕಿ ಆ ಪ್ರದೇಶದ ನೀರಿನ ಅಭಾವ ಪರಿಹಾರವಾಯಿತು. ಒಂದೊಂದಾಗಿ ದೇವಾಲಯಗಳ ಸ್ಥಾನಗಳನ್ನು ಗುರುತಿಸುವುದು ಸಾಧ್ಯವಾಯಿತು. ಅಂತಿಮವಾಗಿ ಇಡೀ ದೇವಾಲಯಗಳ ಸಂಕೀರ್ಣ ಅನಾವರಣಗೊಂಡು ಡಕಾಯಿತರೂ ತಮ್ಮ ಕಾರ್ಯಗಳ ಬಗ್ಗೆ ಹೆಮ್ಮೆ ಪಡುವಂತಾಯಿತು.

(ದೇವಾಲಯ ವಾಸ್ತುಶಿಲ್ಪವೈಭವವನ್ನು ಕುರಿತು ಅನಂತಕುಮಾರ್ ಪ್ರತಿಷ್ಠಾನ ಏರ್ಪಡಿಸಿದ್ದ ವಿಚಾರಸಂಕಿರಣದಲ್ಲಿ ಮಾಡಿದ ಉಪನ್ಯಾಸ ಪಠ್ಯದ ಸಂಗ್ರಹ )

# “ಸ್ತ್ರೀಯರು ಸಮಾಜದ ನೈಜ ವಾಸ್ತುಶಿಲ್ಪಿಗಳು”

**-ತೇಜಸ್ವಿನಿ ಅನಂತಕುಮಾರ್**





ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಬೆಂಗಳೂರಿನ ಜ್ಯೋತಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯು ಮಾ. 12 ರಂದು ಆಯೋಜಿಸಿದ್ದ “ಜ್ಯೋತಿರ್ಮಯಿ” ಸಮಾರಂಭದ ಮುಖ್ಯ ಅತಿಥಿಗಳಾಗಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮಾತನಾಡುತ್ತ ತಂತ್ರಜ್ಞಾನ, ಬಾಹ್ಯಾಕಾಶ, ರಾಜಕೀಯ, ಸಂಶೋಧನೆ, ಕ್ರೀಡೆ - ಹೀಗೆ ವಿವಿಧ ವಲಯಗಳಲ್ಲಿ ಹೆಣ್ಣು ಮಕ್ಕಳು ಅಪ್ರತಿಮ ಸಾಧನೆ ಮಾಡುತ್ತಿದ್ದಾರೆ. ಹೀಗಾಗಿ ಅವರು ಆರೋಗ್ಯವಂತ ಸಮಾಜ ನಿರ್ಮಾಣದ ನೈಜ ವಾಸ್ತುಶಿಲ್ಪಿಗಳಾಗಿದ್ದಾರೆ ಎಂದು ಹೇಳಿದರು. ಜ್ಯೋತಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ಬಿ.ವಿ. ಸೀತಾ, ಟ್ರಸ್ಟಿಗಳಾದ ಶ್ರೀ ಎಂ. ನರಸಿಂಹನ್, ಶ್ರೀ ಬಿ.ಕೆ. ರಮೇಶ್, ಪ್ರಾಂಶುಪಾಲ ಡಾ. ಕೆ. ಗೋಪಾಲಕೃಷ್ಣ ಮತ್ತಿತರರು ಹಾಜರಿದ್ದರು.

**ಅಯೋಧ್ಯೆಯಲ್ಲಿ ಅನ್ನದಾಸೋಹ:** ದೇಶದೆಲ್ಲೆಡೆಯಿಂದ ಅಯೋಧ್ಯೆಗೆ ಆಗಮಿಸುವ ಭಕ್ತರಿಗಾಗಿ ಅದಮ್ಯ ಚೇತನ ಸಂಸ್ಥೆಯು ಶ್ರೀರಾಮ ಪ್ರಾಣಪ್ರತಿಷ್ಠಾಪನೆಯ ದಿನದಿಂದ ಪ್ರಾರಂಭಿಸಿದ ಅನ್ನದಾಸೋಹವು ಯಶಸ್ವಿಯಾಗಿ ಮುಂದುವರಿದಿದೆ. 2024ರ ಮಾ. 2ರವರೆಗೆ ಪ್ರತಿ ದಿನ ಒಂದು ಸಾವಿರ ಭಕ್ತರಿಗೆ ಬೆಳಿಗ್ಗೆ ಉಪಾಹಾರ, ಮಧ್ಯಾಹ್ನ ಹಾಗೂ ರಾತ್ರಿ ಊಟ ನೀಡಲಾಗುತ್ತಿತ್ತು. ಈ ವರೆಗೂ 42 ಸಾವಿರಕ್ಕೂ ಹೆಚ್ಚು ಭಕ್ತರು ಪ್ರಸಾದ ಸೇವಿಸಿದ್ದಾರೆ. ಮಾ. 2 ರಿಂದ ಉಪಾಹಾರದ ವ್ಯವಸ್ಥೆಯು ಮುಂದುವರೆದಿದ್ದು ಪ್ರತಿದಿನ ಸುಮಾರು 400 ಜನರಂತೆ ಮಾರ್ಚ್ 15 ರವರೆಗೆ ಸುಮಾರು 5600 ಜನರು ಉಪಾಹಾರ ಸೇವಿಸಿದ್ದಾರೆ.

**ಮೂಡಬಿದಿರೆಯ ಆಳ್ವಾಸ್‌ನಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್:** ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ವಿಶ್ವ ಮಹಿಳೆಯರ ದಿನಾಚರಣೆ ನಿಮಿತ್ತ ಮಾ. 7ರಂದು ಆಯೋಜಿಸಿದ್ದ ಸಮಾರಂಭದಲ್ಲಿ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಸಾಧಕ ಮಹಿಳೆಯರನ್ನು ಸನ್ಮಾನಿಸಿದರು. ಫೌಂಡೇಶನ್ ಅಧ್ಯಕ್ಷ ಡಾ. ಮೋಹನ ಆಳ್ವ ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.

**ಶಾಲಾಮಕ್ಕಳ ಭೇಟಿ:** ಶಾಲಾ ವಿದ್ಯಾರ್ಥಿಗಳಿಗೆ ರಾಜಕಾರಣ ಹಾಗೂ ಸಮಾಜಸೇವೆಯ ಉತ್ತಮ ನಾಯಕತ್ವದ ಮಾದರಿಯನ್ನು ಪರಿಚಯಿಸುವ ನಿಟ್ಟಿನಲ್ಲಿ ಅನಂತಕುಮಾರ್ ಪ್ರತಿಷ್ಠಾನ ಹಾಗೂ ಅದಮ್ಯ ಚೇತನ ಸಂಸ್ಥೆಯು 2023ರ ಡಿ. 4 ರಿಂದ ಆರಂಭಿಸಿರುವ “ಶಾಲಾ ಮಕ್ಕಳ ಭೇಟಿ” ಕಾರ್ಯಕ್ರಮವು ಯಶಸ್ವಿಯಾಗಿ ಜರುಗುತ್ತಿದೆ. 2024ರ ಮಾ. 4ರವರೆಗಿನ ಅವಧಿಯಲ್ಲಿ 31 ಶಾಲೆಗಳ ಒಟ್ಟು 1150 ವಿದ್ಯಾರ್ಥಿಗಳು ಅನಂತ ಪ್ರೇರಣಾ ಕೇಂದ್ರ ಹಾಗೂ ಅದಮ್ಯ ಚೇತನ ಸಂಸ್ಥೆಗಳಿಗೆ ಭೇಟಿ ನೀಡಿದ್ದರು.

## ತಿಂಗಳ ವರದಿ

(15 ಫೆಬ್ರವರಿ 2024 - 15 ಮಾರ್ಚ್ 2024)

**ಗ್ರಾಮೀಣ ಮಹಿಳೆಯರ ವ್ಯಕ್ತಿತ್ವ ವಿಕಸನ ಶಿಬಿರ:** ಹುಬ್ಬಳ್ಳಿಯ ವಿಜಯನಗರದ ಅನಂತ ಪ್ರೇರಣಾ ಕೇಂದ್ರದಲ್ಲಿ ಅನಂತಕುಮಾರ್ ಪ್ರತಿಷ್ಠಾನ ಹಾಗೂ ಅದಮ್ಯ ಚೇತನ ಸಂಸ್ಥೆಗಳ ಆಶ್ರಯದಲ್ಲಿ “ಗ್ರಾಮೀಣ ಮಹಿಳೆಯರಿಗಾಗಿ ವ್ಯಕ್ತಿತ್ವ ವಿಕಸನ” ಕುರಿತು ಕಾರ್ಯಾಗಾರವು 2024ರ ಫೆ. 26 ರಂದು ನಡೆಯಿತು. ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನ ಸುಳ್ಳ, ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ತಾಲೂಕಿನ ಪರ್ವತಿ ಹಾಗೂ ಗದಗ ಜಿಲ್ಲೆಯ ಹೊಳೆಇಟಗಿ ಗ್ರಾಮಗಳ ಒಟ್ಟು 32 ಮಹಿಳೆಯರು ಪಾಲ್ಗೊಂಡಿದ್ದರು.

ರಾಜ್ಯ ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಡಾ. ಪ್ರಕಾಶ ಭಟ್, ರಂಗಾಯಣದ ಮಾಜಿ ನಿರ್ದೇಶಕ ಸುಭಾಷ್ ನರೇಂದ್ರ, ಸಂಪನ್ಮೂಲ ವ್ಯಕ್ತಿ ಜಗದೀಶ ಬಾಪಟ್, ಮಕ್ಕಳ ಸಾಹಿತಿ ನಿಂಗಣ್ಣ ಕುಂಟಿ ಮತ್ತು ಪ್ರಾಂಶುಪಾಲ ಸತೀಶ್ ಮೂರೂರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ “ಗ್ರಾಮೀಣ ಮಹಿಳೆಯರು ಸ್ವ ಉದ್ಯೋಗ ಕೈಗೊಳ್ಳುವ ಮೂಲಕ ಆರ್ಥಿಕವಾಗಿ ಸಬಲರಾಗಬೇಕು ಮತ್ತು ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕು” ಎಂದು ಶಿಬಿರಾರ್ಥಿಗಳಿಗೆ ತಿಳಿಸಿದರು. ಕಾರ್ಯಕ್ರಮ ಸಂಯೋಜಕಿ ವೀಣಾ ಅಠವಲೆ ಸ್ವಾಗತಿಸಿ, ನಿರೂಪಿಸಿದರು. ಹಿರಿಯರಾದ ಲಕ್ಷ್ಮಣ್ ಓಕ್ ಕಾರ್ಯಾಗಾರದಲ್ಲಿ ಮಾರ್ಗದರ್ಶನ ನೀಡಿದರು.



**ಇತರ ಚಟುವಟಿಕೆಗಳು:** ಅದಮ್ಯ ಚೇತನದ ಚಟುವಟಿಕೆಗಳಾದ ಶ್ರೀಮದ್ ಭಗವದ್ಗೀತಾ ಪಠಣ ಕಾರ್ಯಕ್ರಮವು 112ನೇ ವಾರಕ್ಕೆ ಮುನ್ನಡೆದಿದೆ. ಕಳೆದ 4 ವರ್ಷದಿಂದ ಅಂತರ್ಜಾಲದಲ್ಲಿ ಪ್ರತಿ ಮಂಗಳವಾರದಂದು ಶ್ರೀ ಚೇತನ ಸಭೆಯು ನಡೆಯುತ್ತಿದೆ. “ಹಸಿರು ಭಾನುವಾರ” ಕಾರ್ಯಕ್ರಮವು 429ನೇ ವಾರದತ್ತ ದಾಪುಗಾಲು ಹಾಕುತ್ತಿದೆ. ಭಾರತೀಯ ಸಂಸ್ಕೃತಿ-ಪರಂಪರೆ -ಶಿಕ್ಷಣ ಜಾಗೃತಿಗಾಗಿ ಪ್ರತಿ ತಿಂಗಳ ಕೊನೆಯ ಶನಿವಾರದಂದು “ಎ-ಚಾಟ್” ಸಮಾರಂಭ ನಡೆಯುತ್ತಿದೆ. ಮೈಸೂರು ಆಕಾಶವಾಣಿಯ ಎಫ್ ಎಂ 100.6 ತರಂಗಾಂತರದಲ್ಲಿ ಪ್ರತಿ ಮಂಗಳವಾರ ಬೆಳಿಗ್ಗೆ 6:35ಕ್ಕೆ ಹಾಗೂ ಅದೇ ದಿನ ಸಂಜೆ 6:10ಕ್ಕೆ ಅದಮ್ಯಚೇತನ ಪ್ರಾಯೋಜಿಸಿರುವ ಜನಪ್ರಿಯ “ ಶ್ರದ್ಧೆಯ ಶಿಲ್ಪ” ಕಾರ್ಯಕ್ರಮ ಪ್ರಸಾರವಾಗುತ್ತಿದೆ.

ಅದಮ್ಯ ಚೇತನದಿಂದ ಶಾಲಾ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ನಿತ್ಯ ಅನ್ನದಾನ ನಡೆಯುತ್ತಿದೆ. ಸಮಾರಂಭಗಳಲ್ಲಿ ಸಂಗ್ರಹವಾಗುವ ಪ್ಲಾಸ್ಟಿಕ್ ಇತ್ಯಾದಿ ತ್ಯಾಜ್ಯಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಅದಮ್ಯಚೇತನವು ಪ್ರಾರಂಭಿಸಿರುವ ಪ್ಲೇಟ್‌ಬ್ಯಾಂಕ್ ಯೋಜನೆಯು ಮುಂದುವರಿದಿದ್ದು, ಈ ಮೂಲಕ ಸಾರ್ವಜನಿಕರು ತಟ್ಟೆ, ನೀರಿನ ಲೋಟ, ಚಮಚ ಮುಂತಾದ ಸ್ಟೀಲ್ ಸಾಮಗ್ರಿಗಳನ್ನು ಯಾವುದೇ ಶುಲ್ಕವಿಲ್ಲದೆ ಪಡೆದು, ಪರಿಸರಕ್ಕೆ ಕೊಡುಗೆ ನೀಡಬಹುದಾಗಿದೆ.


## ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Venkatesh Manu / Trivikram Joshi**
Inputs: **Poornaprajna / Srikanth K / ACF / AKP**
Photographs: **Gopal TS / Vasant S. Kulkarni / Internet Sources / AKP / ACF**
Acknowledgements: **GM Inamdar / Beluru Sudarshana / K K Mohammad / C T Ravi**
Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in



ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

## ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ 38 ವಿದ್ಯಾರ್ಥಿಗಳು ಮಾ. 04 ರಂದು ಅದಮ್ಯ ಚೇತನ  ಕೇಂದ್ರಕ್ಕೆ ಭೇಟಿ ನೀಡಿದರು.



ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಫೆ.22 ರಂದು ಕಲಬುರಗಿಗೆ ಭೇಟಿ ನೀಡಿದ ಸಂದರ್ಭದಲ್ಲಿ, ಕಾರ್ಯಕರ್ತರು ಅನಂತಪಥ ಮಾಸಪತ್ರಿಕೆಯ ಪ್ರತಿಯನ್ನು ನೀಡಿದರು.



ಶ್ರೀ ಅನಂತಕುಮಾರ್ ಅವರ ಸಹೋದರ ಶ್ರೀ ನಂದಕುಮಾರ್ ಮತ್ತು ಅವರ ಪತ್ನಿ ಭಾರತಿ ನಂದಕುಮಾರ್ ಅದಮ್ಯಚೇತನದ ಇತರ ಕಾರ್ಯಕರ್ತರೊಂದಿಗೆ ಅಯೋಧ್ಯೆಯ "ಅನ್ನದಾಸೋಹ" ಕೇಂದ್ರದಲ್ಲಿ ಪ್ರಸಾದ ಸ್ವೀಕರಿಸಿದರು.



ಚಿಂತಕಿ  ಡಾ. ವಿ. ಬಿ. ಆರತೀಯವರು ಫೆ.24 ರಂದು ಅದಮ್ಯ ಚೇತನದ ಮೂಲಕ ಸಾರ್ವಜನಿಕರಿಗೆ ಮಧ್ಯಾಹ್ನದ  ಊಟ ನೀಡಿ ತಮ್ಮ ಹುಟ್ಟುಹಬ್ಬವನ್ನು  ಆಚರಿಸಿಕೊಂಡರು.



ಶಿವರಾತ್ರಿಯ ಅಂಗವಾಗಿ 2024ರ ಮಾ. 8 ರಂದು ಅದಮ್ಯಚೇತನ ಸಂಸ್ಥೆಯ ಆವರಣದಲ್ಲಿ ಸಾರ್ವಜನಿಕರಿಗೆ ದಿನವಿಡೀ ಮಜ್ಜಿಗೆಯನ್ನು ವಿತರಿಸಲಾಯಿತು.



ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ತಾಯಿ ಪ್ರತಿಭಾ ಓಕ್ ಅವರೊಂದಿಗೆ ಫೆ.29 ರಂದು ಅಯೋಧ್ಯೆಯ ಶ್ರೀರಾಮ ದೇವಾಲಯದಲ್ಲಿ  ಕಲಶ ಪೂಜೆ ಸಲ್ಲಿಸಿದರು. ಗಣ್ಯರಾದ ರಾಜೇಂದ್ರಸಿಂಗ್, ಸಂಸ್ಥೆಯ ಶ್ರೀಮತಿ ಸುಮಾ ಮತ್ತು ಶ್ರೀಮತಿ ಜಿ.ಟಿ. ಸುಜಾತ ಪಾಲ್ಗೊಂಡಿದ್ದರು.



ಬೆಂಗಳೂರಿನ ರಾಮೋಹಳ್ಳಿಯ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮದ ಶ್ರೀ ಆರೂಢಭಾರತೀ ಸ್ವಾಮೀಜಿಯವರು ಅದಮ್ಯ ಚೇತನಕ್ಕೆ ಭೇಟಿ ನೀಡಿದ ಸಂದರ್ಭದ ಚಿತ್ರ



ಅದಮ್ಯ ಚೇತನ ಅಧ್ಯಕ್ಷೆ ಹಾಗೂ ಅನಂತಕುಮಾರ್ ಪ್ರತಿಷ್ಠಾನ ಕಾರ್ಯದರ್ಶಿ  ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು

## ಅನಂತ ಚಿತ್ರಸಂಪುಟ

ಚುನಾವಣಾ ರಾಜಕೀಯದಲ್ಲಿ ಸ್ಥಳೀಯ ಸಮಸ್ಯೆಗಳ ಅರಿವು, ಜನಸಂಪರ್ಕ ಮತ್ತು ತಂತ್ರಗಾರಿಕೆಗಳ ಮಹತ್ವವನ್ನು ಅರಿತಿದ್ದ ಅನಂತಕುಮಾರ್ ಕರ್ನಾಟಕವೂ ಸೇರಿದಂತೆ ಹಲವು ರಾಜ್ಯಗಳ ಚುನಾವಣಾ ಪ್ರಭಾರಿಯಾಗಿ ಪಕ್ಷದ ಯಶಸ್ಸಿಗೆ ಕಾರಣರಾದರು







